(*f*) if so, when the work of this project would be taken up ?

SRI H. N. NANJE GOWDA —(Minister of State for Major Irrigation)

(*a*) Details are yet to be finalised as the Project is under investigation.

(*b*) Will be considered at the appropriate time.

(*c*) to (*f*) Does not arise

NON-SUPPLY OF SEMEN TO A. I. CENTRES

6 5. SRI GATTI CHANDRASHEKAR (Gubbi).—Will the Minister of State for Animal Husbandry be pleased to state :—

(*a*) whether it has come to the notice of Government that the people are losing interest in artificial inseminations of cattles;

(*b*) with a view to develop the famous Hallikar breed of Tumkur District whether they have determined to give more attention to insemination of Hallikar breed instead of insemination of foreign breeds;

(*c*) the action taken by Government in respect of lot of difficulties experienced by A I. Centres for the last six months due to non supply of semen of he-buffalo ?

SRI N. CHIKKE GOWDA.—(Minister of State for Animal Husbandry)

(*a*) No.

(*b*) No.

(*c*) It is not possible to supply semen of he-buffalo to tee artificial insemination centre of this district as there are no adequate number of he-buffaloes at present. Efforts were made to purchase buffaloes of good breed from Hissar Karnal and Military dairy farm, Agra.

CALLING ATTENTION TO MATTERS OF URGENT PUBLIC IMPORTANCE

(i) *Re: food Poisoning Incident of Chinnanegenahalli in limit of Kadugodi Polis Station.*

SRI B. B. SAYANAK (Belgaum) : I call the attention of the Chief Minister to the food poisoning incident at Chinnanagenahalli in the limits of Kadugodi Police Station.

SRI R. D. KITTUR (Minister of State for Home): Sir, I State as follows. It is reported that on 15th July 1972 food consisting of ries ragi balls and curry for night meals was prepared in the house of Smt. Thippamma of Chinnanagenahalli in the limits of Kadugodi Police Station and that, at about 7-30 P.M. Smt. Parvathamma, sister-in-law of Smt. Tippamma served the food to the members of the family. After consuming the food the persons, whose names are as foliows, fainted :

1. Hemavathi D/o Appaiah aged 11 years.
2. Padmavathi D/o Appaiah aged 13 years.
3. Chandravathi D/o Appaiah aged 11 years.
4. Balakrishna S/o Appaiah aged 9 years.
5. Suresh S/o Appaiah aged 5 years
6. Suseelamma D/o Papanna aged 12 years.
7. Munirathnamma D/o Papanna aged 14 years
8. Narayanaswmy S/o Papanna aged 9 years
9. Chikkaveeramma W/o Papanna aged 45 years
10. Jayalakshmi D/o Appainna aged 8 years
11. Parvathamma W/o Appainna aged 29 years
12. Ratnamma D/o Devanahalli Chikkaveerappa aged 11 years.
13. Doddappaiah S/o Doddam iniyappa aged 38 years
14. Muniseethappa S/o Sandappa aged 28 years.

Immediately the villagers removed these persons to Victoris Hospital, Bangalore and admitted them for treatment, After treatment all of them recovered and were discharged from the hospital the same day.

Smt. Thippamma wife of Appaiah, lodged a complaint on 16th July 1972 with the police in regard to this incident, She suspects that some of her neighbours, who are related to her and who bear ill-will towards her family, may have mixed poisonous ingredients in the food on consuming which the persons fainted, The Sub-Inspector of Police, Kaduge Police Station visited the Victoria Hospital and saw the condition of the affected persons. He has seized the remains of the food from house of the complainant for purpose of chemical analysis A case in crime No. 60/72 under section 448 and 120 IPC has been registered and investigation is in progress.

SRI B. B. SAYANAK : What is the progress of the investigation ?

SRI R. D. KITTUR : After the receipt of the report from the Chemical Examiner the case will be finalised.

(ii) *Re: Strike by the students of Malnad College of Engineering Hassan.*

SRI K. H. HANME GOWDA (Hassan): I call the attention of the Minister for Education to the strike by the students of Malnad College of Engineering, Hassan

SRI A R. BADARINARAYAN (Minister for Education): Sir I state as follows.

1. A Memorandum signed by eight students of the Engineering College was received by the Vice-Chancellor on 18th July 1972 requesting for the concession of triple ordinance parallel courses or a full carry over system. The matter was referred to the Dean, Faculty of Engineering, who stated that this issue has been discussed in all its aspects by the academic bodies and the same was turned down as any more concessions would lower the standards of engineering education.

2. Four students started Hunger strike at the University Offices from 20th July, 1972. An emergency meeting of Principals of Engineering Colleges was convened on 22nd July 1972. The Principals passed a resalution unanimously that concessions already granted to the students of semester scheme are quite liberal and extending further concessions would not be in the best interests of the students themselves and would lower the standard of engineering education. The Committee of the Dears and Chairman of the Board of Studies of the three Universities of Mysore, Bangalore and Karnatak which met on 1st July, 1972 much earlier to the date of receipt of representation, has unanimously resolved that the grant of carry over system to the students who have failed in more than two subjects in the engineering courses has proved detrimental to the academic standards. They recommended that this carry over system should be abolished forthwith.

3. On 24th July 1972 the students of National Institute of Engineering and Shri Jayachamarajendra College of Engineering, Mysore, and Manipal Engineering College, Manipal, have unanimously resolved that the concessions granted for B. E. Degree (Samester) students are quite liberal and granting any further concessions will nat be in their own interest. They have, therefore, emphatically stated that they do not want auy further concessions.

4. Consequent on the decisions taken not to extend a full carry over system to the Mysore University Colleges, it is learnt that a few students are on strike in front of the University Office at Mysore It is also ascertained that there has been similar strike in the Malnad College of Engineering, Hassan As has been made out very clearla in the precedin, paras, the decision taken is only to ensure that academic standards are maintained. Further, the decision taken also ensures

(SRI A. R. BADARINARAYAN)

hat the students are not put to much hardship consequent on having too may subjects in the last few years on account of this carry over system. Such being the case, I think, members would agree that the demand is not justifiable and should be withdrawn

ಶ್ರೀ ಕೆ.ಎಚ್. ಹನುಮೇಗೌಡ -ಮೈಸೂರು ಯೂನಿವರ್ಸಿಟಿಯ ಆಶ್ರಯದಲ್ಲಿ ಇರತಕ್ಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸಬ್ಜೆಕ್ಟನಲ್ಲಿ ಫೇಲ್ ಆದರೂ ಮುಂದಿನ ಕ್ಲಾಸ್‌ಗೆ ಹೋಗಿ ಓದಿ ಕೊಂಡು ಪರೀಕ್ಷೆಗೆ ಕೂತುಕೊಂಡು ಪಾಸ್ ಮಾಡುವ ಅವಕಾಶವಿದೆ. ಬೆಂಗಳೂರು ಯೂನಿವರ್ಸಿಟಿಯಲ್ಲಿ ಮೂರು ಸಬ್ಜೆಕ್ಟನಲ್ಲಿ ಫೇಲ್ ಆದರೂ ವಿದ್ಯಾರ್ಥಿಗಳು ಮುಂದಿನ ಕ್ಲಾಸಿಗೆ ಹೋಗಿ ಪರೀಕ್ಷೆಗೆ ಕೂತುಕೊಳ್ಳಬಹುದು ಎಂದು ಇದೆ. ಈ ರೀತಿ ಮೈಸೂರು ಯೂನಿವರ್ಸಿಟಿಗೂ ಮತ್ತು ಬೆಂಗಳೂರು ಯೂನಿವರ್ಸಿಗೂ ವ್ಯತ್ಯಾಸ ಇರುವುದಕ್ಕೆ ಕಾರಣ ಏನು ? ಏತಕ್ಕೆ ಸರಿಪಡಿಸಿಲ್ಲ ?

ಶ್ರೀ ಎ. ಆರ್. ಬದರಿನಾರಾಯಣ್.—ಬೆಂಗಳೂರು ಯೂನಿವರ್ಸಿಯಲ್ಲಿ ತಪ್ಪು ಮಾಡಿದರೆ, ಅದೇ ರೀತಿ ಇನ್ನೊಂದು ಕಡೆ ತಪ್ಪು ಮಾಡಬೇಕು ಎಂದು ಅಲ್ಲ. ಬೆಂಗಳೂರು ಯೂನಿವರ್ಸಿಟಿಯಲ್ಲಿ ತಪ್ಪು ಮಾಡಿದ್ದನ್ನು ರಿವೈಸ್ ಮಾಡಬೇಕು ಎಂದು ಸರ್ಕಾರ ಯೋಜನೆ ಮಾಡುತ್ತಿದೆ.

ಶ್ರೀ ಕೋಣಂದೂರು ಲಿಂಗಪ್ಪ:—ಕ್ಯಾರಿ ಓವರ್ ಸಿಸ್ಟಮ್‌ಗೆ ಸಂಬಂಧಪಟ್ಟಂತೆ ತಾವು ಸಮಗ್ರವಾಗಿ ಹೇಳಿಕೆ ಕೊಟ್ಟಿದ್ದೀರಿ. ಬೆಂಗಳೂರು ಯೂನಿವರ್ಸ್‌ಟಿಯಂವರು ತಪ್ಪು ಮಾಡಿದ್ದಾರೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದಿರಿ. ಅದು ಏನೇ ಇರಲಿ ಈ ಸಂಬಂಧದಲ್ಲಿ ವಿದ್ಯಾರ್ಥಿಗಳಿಂದ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಪ್ರಾಣಾಪಾಯವಾಗತಕ್ಕ ಘಟನೆ ಮೈಸೂರಿನಲ್ಲಿ ಏನು ನಡೆಯಿತು ಅದರ ಬಗ್ಗೆ ಏನು ಕಾರ್ಯಕ್ರಮ ಕೈಕೊಂಡಿದ್ದೀರಿ?

ಶ್ರೀ ಎ ಆರ್. ಬದರಿನಾರಾಯಣ:—ಅದು ಬಹಳ ವಿಶಾದಕರ. ಯಾರೋ ಬಸ್ಸಿನಲ್ಲಿ ಬಂದು ಅವರು ಸ್ಟೂಡೆಂಟ್ಸ್ ಜೆಡೋ ಅಲ್ಲವೋ ಗೊತ್ತಿಲ್ಲ, ಅವರ ಮನೆಯೊಳಗೆ ನುಗ್ಗುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಉಪಕುಲಪತಿಗಳು ಪ್ರಾಣಾಪಾಯಕ್ಕೂ ಕೂಡ ಒಳಗಾಗಿದರು ಎಂದು ಕೇಳಿದೆ. ಬಹುಶ: ಪೋಲೀಸರಿಗೆ ಇನ್ ಫರಮೇಷನ್ ಕೊಟ್ಟರು ಎಂದು ಕಾಣಿಸುತ್ತದೆ, ಪೋಲೀಸರು ಅಷ್ಟರಲ್ಲಿ ಬಂದು ಕೆಲವರನ್ನು ಅರೆಸ್ಟ್ ಮಾಡಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ:—ವಿದ್ಯಾರ್ಥಿಗಳ ತಪ್ಪಲ್ಲ. ವಿದ್ಯಾರ್ಥಿಗಳನ್ನು ಪ್ರಚೋದನೆ ಮಾಡತಕ್ಕ ಹಿನ್ನೆಲೆ ಇದೆ, ಅದರಿಂದ ಮಾಡಿದ್ದಾರೆ. ಪ್ರಚೋದನೆ ಮಾಡತಕ್ಕವರ ಮೇಲೆ ಏನು ಕ್ರಮ ತೆಗೆದು ಕೊಂಡಿದ್ದೀರಿ? ಅವರು ಯಾರು ಎನ್ನುವುದು ತಮಗೆ ಗೊತ್ತಿದೆಯೇ? ವಿದ್ಯಾರ್ಥಿಗಳ ಬಗ್ಗೆ ನಮಗೆ ಏನೂ ಸಂಶಯ ಇಲ್ಲ.

ಶ್ರೀ ಎ.ಆರ್. ಬದರಿನಾರಾಯಣ:—ಆ ವಿಷಯ ಪೋಲೀಸರ ವಿಚಾರಣೆಯಲ್ಲಿದೆ, ತಮಗೆ ಗೊತ್ತಿದ್ದರೆ, ತಿಳಿಸಿದರೆ the mater will be certarinly emquired into.

ಶ್ರೀ ವಾಟಾಳ್ ನಾಗರಾಜ್:—ಪ್ರಾಣಾಪಾಯ ತಪ್ಪಿಸುವುದಕ್ಕೆ ಮಂತ್ರಿಗಳಿಗೆ ಇರುವ ಹಾಗೆ ಉಪಕುಲಪತಿಗಳಿಗೆ ಗನ್ ಮ್ಯಾನ್ ಕೊಡುವುದು ಒಳ್ಳೆಯದಲ್ಲವೇ?

(No answer)

ಶ್ರೀ ಎಚ್. ಡಿ. ದೇವೇಗೌಡ.—ಬಿಜಾಪುರ ಜಿಲ್ಲೆ ಹರಿಜನ ಕೋ ಆಪರೇಟಿವ್ ಸೊಸೈಟಿಯಲ್ಲಿ ಏನು ಸತ್ಯಾಗ್ರಹ ಮಾಡುತ್ತಾ ಇದ್ದಾರೆ ಅದರ ಬಗ್ಗೆ ತಮಗೆ ಆಗಲೇ ನೋಟೀಸ್ ಕೊಟ್ಟಿದ್ದೆ ನೆನ್ನೆ ಹೇಳಿದಿರಿ ಇವೊತ್ತು ತೆಗೆದುಕೊಳ್ಳೋಣ ಎಂದು. ಇವೊತ್ತು ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು.—ನಾನು ತರಿಸಿ ನೋಡುತ್ತೇನೆ ಎಂದು ಹೇಳಿದ್ದೆ. ಇವೊತ್ತು ತೆಗೆದುಕೊಳ್ಳುತ್ತೇನೆ ಎಂದು ಹೇಳಲಿಲ್ಲ.

ಶ್ರೀ ಎಚ್.ಡಿ. ದೇವೆಗೌಡ.—ಶಾಸನಸಭೆ ಇನ್ನು ಒಂದೆರಡು ದಿವಸಗಳಲ್ಲಿ ಮುಗಿಯಂಬಹುದು ಎಂದಂ ಕೇಂದ್ರದಿಂದ ಯಾರೋ ಬಂದಿದ್ದಾರೆ, ಸರ್ಕಾರಕ್ಕೆ ಗಂಡಾಂತರ ಇದೆಯೆಂದು ಕೇಳಿದೆ?

ಶ್ರೀ ಎಸ್. ಎಂ. ಶೀರನಾಳಿಚಂದ್ರ ಶೇಖರ್.—ಮಾನ್ಯ ಸದಸ್ಯರು ಏತಕ್ಕೆ ಉಹಾಪೋಹ ಕಲ್ಪನೆ ಮಾಡಿ ಹೇಳುತ್ತಾರೆ ಇ ಗೊತ್ತಿಲ್ಲ.

ಅಧ್ಯಕ್ಷರು .—ಬನಪ್ಪ ಪಾರ್ಕಿನ ಹಾಗೆ ಗಂಟಲು ದೊಡ್ಡದು ಮಾಡಿ ಸ್ವಿಚ್ ಹಾಕಿ ಏತಕ್ಕೆ ಹೀಗೆ ಮಾತನಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್:—ಇಂದು ಬನಪ್ಪ ಪಾರ್ಕ್ ಎಂದು ನಾವು ಯಾರು ತಿಳಿದುಕೊಂಡಿರಲಿಲ್ಲ.

ಅಧ್ಯಕ್ಷರು:—ನಾನು ನಿಂತಿರುವಾಗ ತಾವು ಮಾತನಾಡಿದರೆ ಇದು ಬನಪ್ಪ ಪಾರ್ಕ್ ಎಂದು ಹೇಳ ಬೇಕಾಗುತ್ತದೆ. ದಯಮಾಡಿ ಹಾಗೆ ತಿಳಿದುಕೊಳ್ಳಬೇಡಿ ತಾವು ಒಂದು ಲಕ್ಷ ಜನರ ಪ್ರತಿನಿಧಿಗಳಾಗಿ ಬಂದಿದ್ದೀರಿ. ಜೋರಾಗಿ ಕಿರುಚುಕೊಳ್ಳುವುದಕ್ಕೆ ದೊಡ್ಡ ಗಂಟಲಿನಿಂದ ಮಾತನಾಡುವುದಕ್ಕೆ ಕಾರಣವಿಲ್ಲ. ಇಷ್ಟು ದುಡ್ಡು ಖರ್ಚುಮಾಡಿ ಧ್ವನಿವರ್ಧಕ ಯಂತ್ರಗಳನ್ನು ತರಿಸಿದ್ದೇವೆ, ಸೂಕ್ಷ್ಮವಾಗಿ ಮಾತನಾಡಿದರೂ ಕೇಳುತ್ತದೆ. ಮಾತನಾಡುವಾಗ ಒಬ್ಬೊಬ್ಬರು ಮಾತನಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್.ಎಸ್. ಸಿದ್ದಪ್ಪ:—ತಾವು ಎರಡನೇ ಸಾರಿ ಇದು ಹೇಳಿದ್ದು. ನನ್ನ ಕಷ್ಟ ನಿಮಗೆ ನಿವೇದಿಸಿದೆ. ಸದಸ್ಯನ ಕಷ್ಟ ನಿವೇದಿಸಿದರೆ, ಅದು ತಮ್ಮ ಗಮನಕ್ಕೆ ಬರದೆ ಹೋದರೆ ನಾನು ಅಸೆಂಬ್ಲಿ ಸದನಕ್ಕೆ ಬಂದು ಏನು ಮಾಡಬೇಕು? ನನ್ನ ಹುಟ್ಟು ಗಂಟಲೇ ದೊಡ್ಡದು. ಅದಕ್ಕೆ ನಾನು ಏನು ಮಾಡುವುದಕ್ಕೆ ಆಗುವುದಿಲ್ಲ. ಇಂಟೆನ್‌ಷನ್‌ಲ್ಲಾಗಿ ನಾನು ಗಟ್ಟಿಯಾಗಿ ಮಾತನಾಡುವುದಿಲ್ಲ. ಮೆತ್ತಗೆ ಮಾತನಾಡಬೇಕೆಂದು ನನಗೆ ಯಾರೆತು ಹೋಗುತ್ತದೆ. ಆ ಕಡೆ ಸದಸ್ಯರಾದ ಶ್ರೀಮಾನ್ ಚಂದ್ರಶೇಖರ್ ರವರು ಜೋರಾಗಿ ಕೂಗಿದರು.

ಅಧ್ಯಕ್ಷರು:—ನಾನು ಎಲ್ಲರಿಗೂ ಒಂದೇ ಮನವಿ ಮಾಡುತ್ತೇನೆ.

ಶ್ರೀ ಎಚ್.ಎಸ್. ಸಿದ್ದಪ್ಪ:—ಆ ಕಡೆ ಸದಸ್ಯರು ಮಂತ್ರಿ ಮಂತ್ರಿಗಳು ಬನಪ್ಪ ಪಾರ್ಕಿನಲ್ಲಿ ಹೊಡೆದಂತೆ ಟೇಬಲ್ ಕುಟ್ಟಿದರು ಅದು ಸರಿಯಲ್ಲ ಎಂದು ತಾವು ಅವರಿಗೆ ಹೇಳಲಿಲ್ಲ.

SRI C.M. ARUMUGHUM.—Madam Speaker, I have great respect for the Chair. Any remark that comes from the Chair comes from a person who is presiding over this House and the Chair is the symbol of decorum and dignity of this House. You have unlimited powers; you could even name a person and ask him to withdraw from the House; you can even suspend him. But I personally feel that this House is not a park as stated by you. I as a member may say something and get out of this House. But it is not the case with the Hon. Speaker. I have understood the rules of procedure thoroughly; I have also visited several State Legislatures and even Parliament too and well-acquainted with the procedure adopted there.

SRI S.M. KRISHNA —The Speaker has never said that this is a park. Let us not attribute motives to the Chair.

SRI C.M. RUMUGAM.—When I say it is not commercial street or chikpet, what does it mean?

MADAM SPEAKER —I only request the hon. members to take this as a House and not anything else.

SRI C.M. ARUMUGAM.—We know that this is a House; this is the Mysore Legislative Assembly. We have been elected and we all call this as House only I may say something and get away, but it is not the case with the Speaker. The Chair controls the proceedings of the House and also controls the House. Everything that comes from the Chair is a Ruling; it is not a Spech. It has got some relevance also.

MADAM SPEAKER.—It is also a request.

SRI C.M. ARUMUGAM.—Supposing the Chair asks me to keep out. I will have to obey the Chair and go out. That unlimited power is vested with the Speaker. We are helpless. When the Assembly is going on the Ministers go away. Sometimes I take it as a protest. It is a moral duty cast on the Ministers to be in the House when the Assembly is in Session. But they go on a Jolly trip for laying some foundation stone. We are here under the protection of the Chair. Somebody says that there will be a collapse of the Ministry. I am not concerned with it. I only submit that it wounds me when I hear such remarks from the Chair—I do not know about others.

MADAM SPEAKER.—Does not The non member think it wounds me also? My request to the hon. members is to behave in a good manner and maintain the dignity of the House.

ಬಸವಣ್ಣನವರು ಏನು ಹೇಳುತ್ತಾರೆ?

SRI M.C ARUMUGAM.—I know what Basavanna says. I may not be able to say it in Kannada. Basavanna says that if the mother could feed the child and poision him through her milk who is there to help him.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಆರ್.ವಿ.ಗಂಗರವರು ಹೇಳಿದ ವಿಚಾರದ ಬಗ್ಗೆ ಅದಕ್ಕೆ ಪೂರಕವಾಗಿ ಒಂದು ಮಾತನ್ನು ಇಲ್ಲಿ ಹೇಳಲು ಇಚ್ಛೆ ಪಡುತ್ತೇನೆ

ಅಧ್ಯಕ್ಷರು.—ಅವರು ಹೇಳುವುದನ್ನೆಲ್ಲಾ ಆಗಲೇ ಹೇಳಿದ್ದಾರೆ. ಅವರ ಈ ಬಗ್ಗೆ ಮತ್ತೆ ತಾವೇನು ನನಗೆ ಬುದ್ಧಿವಾದವನ್ನು ಹೇಳಬೇಕೇನು? ಅವರು ಆಗಲೇ ನಮ್ಮನ್ನೆಲ್ಲಾ ತಾಯಿಯಂತೆ ಮಕ್ಕಳು ನೋಡುವ ಹಾಗೆ ನೋಡಿಕೊಳ್ಳಿ ಎಂದಾಗಲೇ ಹೇಳಿದ್ದಾರೆ. ಇದರ ಮೇಲೆ ಮತ್ತೆ ತಾವೇಕೆ ಹೇಳಬೇಕು? ನನಗೆ ತಮ್ಮ ಬುದ್ಧಿವಾದ ಈಗ ಬೇಕಿಲ್ಲ. ಪ್ರತಿಯೊಂದು ವಿಚಾರದಲ್ಲೂ ಇಲ್ಲಿ ಮಾತಾಡಬೇಕೇನು?

ಶ್ರೀ ಕಾಗೋಡು ತಿಮ್ಮಪ್ಪ.—ಇಲ್ಲಿ ನಾವು ಮಾತಾಡಲಿಕ್ಕೆ ಬಂದಿರುವುದು. ಪ್ರತಿಯೊಂದು ವಿಚಾರದಲ್ಲೂ ಬೇರೆ ಸದಸ್ಯರು ಮಾತನಾಡುವಾಗ ನಾವು ಹೇಳುವಾಗ ನಮಗೆ ಮಾತಾಡಲು ಸ್ವಲ್ಪ ಅವಕಾಶವನ್ನು ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರಾದ ಶ್ರೀ ಸಿದ್ದಪ್ಪ ನವರು ಹೇಳಿದ ವಿಚಾರದಲ್ಲಿ ತಾವು ಅಡಿರತಕ್ಕ ಮಾತು ನಮಗೆ ಎಂದರೆ ಈ ಕಡೆಯ ಸದಸ್ಯರಿಗೆ ತುಂಬಾ ನೋವನ್ನುಂಟು ಮಾಡಿದೆ. ಈ ಮಾತನ್ನು ಶ್ರೀ ಆರುಮುಗಂ ರವರು ಆಗಲೇ ಹೇಳಿದ್ದಾರೆ. ಅದಕ್ಕೆ ಪೂರಕವಾಗಿ ಒಂದು ಅಂಶವನ್ನು ಇಲ್ಲಿ ಹೇಳಲು ಇಚ್ಛೆ ಪಡುತ್ತೇನೆ ಅವರು ಹೇಳಿದಂತಹ ಮಾತುಗಳನ್ನು ನಾವೆಂದಿಗೂ ಮರೆಯಲು ಸಾಧ್ಯವಿಲ್ಲ, ಇಂತಹ ಹಲವಾರು ಘಟಗಳು ನೆ ಹಿಂದೆ ಇಲ್ಲೇ ನಡೆದು ಹೋಗಿವೆ, ಅನೇಕ ಸಾರಿ ನಾನು ನೋಡಿದ್ದೇನೆ. ನಾನು ಇಲ್ಲಿಗೆ ಬಂದ ಮೇಲೆ ಮೂರು ಜನ ಅಧ್ಯಕ್ಷರನ್ನು [ನೋಡಿದ್ದೇನೆ [ಶ್ರೀಮಾನ್ ವೈಕುಂಠ ಬಾಳಿಗಾರವರು, ಶ್ರೀಮಾನ್ ಕೊಡವಳೆ ಯವರು ಮತ್ತು ಈಗ ತಾವು ಈ ಸಭೆಯ ಅಧ್ಯಕ್ಷರಾಗಿದ್ದೀರಿ.

ಅಧ್ಯಕ್ಷರು.— ತಾವು ಒಂದು ನಿಮಿಷದಲ್ಲಿ ಹೇಳುತ್ತೇನೆಂದು ಹೇಳಿ ಇದೇನು ತಾವು ಹೇಳುತ್ತಿರುವುದು? ತಾವು ಇನ್ನೂ ಚಿಕ್ಕವರು ಇನ್ನೂ ಹದಿನೈದು ವರ್ಷಗಳ ಕಾಲ ಇಲ್ಲಿರಬಹುದು ಎಂತ್ತು ಇನ್ನೂ ಐದು ಜನ ಅಧ್ಯಕ್ಷರನ್ನು ನೋಡಬಹುದು. ಇದಕ್ಕೆಲ್ಲಾ ಸಂಬಂಧವೇನು

ಶ್ರೀ ಎಸ್. ಬಂಗಾರಪ್ಪ.—ನಾನು ತಮ್ಮಲ್ಲಿ ನಿವೇದಿಸುತ್ತಿರುವುದು, ೧೯೬೭ರಲ್ಲಿ ಶ್ರೀಮನ್ ವೈಕಂಠ ಬಾಳಿಗಾರವರು ಈ ಸಭೆಯ ಅಧ್ಯಕ್ಷರಾಗಿದ್ದ ಕಾಲದಲ್ಲಿ ಎಲ್ಲರ ಪ್ರೀತಿಯನ್ನೂ ಸಂಪಾದಿಸಿ ಬಹಳ ಒಳ್ಳೆಯ ಹೆಸರನ್ನೂ ಅವರು ಪಡೆದಿದ್ದರು. ನಮ್ಮನ್ನು ತಾವು ಗಂಟೆ ಕುಟ್ಟುತ್ತಿರುವಂತೆ ಕುಟ್ಟಿ ಕೂರಿಸುತ್ತಿರಲಿಲ್ಲ. ಅಷ್ಟು ಗೌರವವನ್ನು ಎಲ್ಲ ಜನರಿಂದಲೂ ಬಹುಮಟ್ಟಿಗೆ ಈ ಹೌಸಿನಲ್ಲಿ ಪಡೆದಿದ್ದರು ಮತ್ತು ಈ ಸಭೆಯ ಘನತೆ ಗೌರವಗಳನ್ನು ಕಾಪಾಡುವುದಕ್ಕೆ ಎಲ್ಲ ಸದಸ್ಯರಿಗೂ ಅವಕಾಶವನ್ನು ದೊರಕಿಸಿಕೊಡುತ್ತಿದ್ದರು. ಮತ್ತು ಎಲ್ಲರೊಡನೆಯೂ ಹೊಂದಿಕೊಂಡು ಬರುತ್ತಿದ್ದರು ಮತ್ತು ನಮ್ಮ ಸಹಕಾರವನ್ನು ಎಲ್ಲ ಕಾಲದಲ್ಲೂ ಕೊಡುವುದಕ್ಕೆ ಸಿದ್ದರಾಗಿದ್ದೆವು. ಶ್ರೀ ಬಾಳಿಗಾರವರು ಯಾವ ಸದಸ್ಯರ ಬಗ್ಗೆ ಕೂಡ ಒಂದು ಮಾತನ್ನೂ ಆಡುತ್ತಿರಲಿಲ್ಲ.

ಶ್ರೀ ಆರ್. ಗುಂಡೂರಾವ್ —ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. ಈ ಸಭೆಯಲ್ಲಿ ಚರ್ಚೆಯಾಗುತ್ತಿರುವ ವಿಚಾರ ಯಾವ ಪ್ರೊಸೀಜರಿನಲ್ಲಿದೆ? ಮತ್ತು ಇದರಲ್ಲಿ ಹಿಂದೆ ಯಾವುದೋ ಮಾತು ಸ್ವೀಕರು ಹೇಳಿದರು ಎಂದು ಇಲ್ಲಿ ಹೇಳುವುದೇನು ನಮಗೊಂದೂ ಅರ್ಥವಾಗುತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಇದು ಜೀರೋ ಅವರ್ ಆದಕ್ಕಾಗಿ ಇಲ್ಲಿ ನಾನು ತಮಗೆ ಮನವಿ ಮಾಡುತ್ತಿರುವುದು.

MADM SPEAKER.—What is that Zero hour?

SRI S. BANGARAPPA —That has been the precedent. ಜೀರೋ ಅವರಿನಲ್ಲಿ ಕೆಲವು ವಿಚಾರಗಳನ್ನು ಇಲ್ಲಿ ಹೇಳಬೇಕಾಗಿದೆ.

MADAM SPEAKER —If the hon. member wants to condemn, he can send a motion. ಈ ವೇಳೆಯಲ್ಲಿ ತಮಗೆ ಬೇಕಾದ ಹಾಗೆ ಮಾತಾಡಬಹುದೇ?

SRI S.M. KRISHNA (Minister for Industries.—Is Sri Bangarappa trying to question or trying to attribute motives to the Speaker? Enough has been said by Sri Arumugam and it has been taken very kindly by the Speaker.

ಶ್ರೀ ಎಸ್. ಬಂಗಾರಪ್ಪ—ನಮಗೆಲ್ಲಾ ಇದರಿಂದ ತುಂಬಾ ನೋವುಂಟಾಗಿದೆ. ಇದಕ್ಕಾಗಿ ಅಧ್ಯಕ್ಷರಲ್ಲಿ ನಾನು ಮನವಿ ಮಾಡುವುದು ಇನ್ನು ಒಂದೇ ಮಾತಿನಲ್ಲಿ ಇಲ್ಲಿ ಹೇಳಿ ಮುಗಿಸುತ್ತೇನೆ. ನಾನು ಕೆಲವು ಸೂಚನೆಗಳನ್ನು ಕೊಟ್ಟು ತಮಗೆ ನಮನವಿ ಮಾಡುತ್ತೇನೆ.

ಅಧ್ಯಕ್ಷರು.—ತಾವು ದೀರ್ಘವಾಗಿ ಇಲ್ಲಿ ಭಾಷಣ ಮಾಡುವ ಅವಶ್ಯಕವಿಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಿ. ತಾವು ಕುಳಿತುಕೊಳ್ಳುತ್ತೀರೋ ಇಲ್ಲವೋ?

ಶ್ರೀ ಎಸ್. ಬಂಗಾರಪ್ಪ —ನಾವು ಕುಳಿತುಕೊಳ್ಳುತ್ತೇವೆ. ಆದರೆ ಸ್ವಲ್ಪ ನಾವು ಹೇಳುವುದು ತಾವು ತಾಳ್ಮೆಯಿಂದ ಕೇಳಬೇಕು.

2—30 P.M.

ಅಧ್ಯಕ್ಷರು : ತಾವು ಈಗ ಕುಳಿತುಕೊಳ್ಳಬೇಕು.

Matter expended as ordered by the chair.

ಶ್ರೀ ಎಚ್. ಡಿ ದೇವೇಗೌಡ.—ಬಿಜಾಪುರದ ವಿಷಯದ ಬಗ್ಗೆ ಸಬಂಧಪಟ್ಟ ಮಂತ್ರಿಗಳಿಂದ ವಿವರಣೆ ಪಡೆಯುವ ಬಗ್ಗೆ ನಾವು ನೋಟೀಸ್ ಕೊಟ್ಟಿದ್ದೇವೆ ಈ ಗಹನವಾದ ವಿಷಯದ ಬಗ್ಗೆ ಪ್ರಸ್ತಾಪ ಮಾಡೋವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ನಾಳೆಯೇ ಈ ಸಭೆ ಮುಂಕ್ಕಾಯವಾಗುತ್ತದೆ

(ಶ್ರೀ ಎಚ್ ಡಿ. ದೇವೆಗೌಡ)

ಎಂಬ ಅಭಿಪ್ರಾಯ ಬೇರೆ ಇದೆ. ಆದ್ದರಿಂದ ಈ ವಿಷಯದ ಬಗ್ಗೆ ನಾವು ಪ್ರಸ್ತಾಪ ಮಾಡೋಣವೆಂದರೆ ಮಂತ್ರಿಗಳೇ ಈ ಸಭೆಗೆ ಬರುವುದಿಲ್ಲ. ಈ ಬಗ್ಗೆ ನಾವೇನಾದರೂ ಕಟುವಾಗಿ ಹೇಳಿದರೆ ತಮ್ಮ ಮನಸ್ಸಿಗೆ ನೋವಾಗುತ್ತದೆ. ಮಂತ್ರಿಗಳು ಮಾಡುವ ತಪ್ಪಿಗೆ ತಮ್ಮನ್ನು ಉದ್ದೇಶಿಸಿ ಮಾತನಾಡುವ ಪ್ರಸಂಗ ಬರುತ್ತದೆ. ಇವೊತ್ತು ಆದನ್ನು ತೆಗೆದುಕೊಳ್ಳೋಣ ಎಂದು ಹೇಳಿದ್ದರು. ಆದರೆ ಮಂತ್ರಿಗಳೇ ಇಲ್ಲ. ಈ ರೀತಿ ಮಾಡಿದರೆ ನಾವು ಎಲ್ಲಿಯವರೆಗೆ ಸಹಕರಿಸುವುದಕ್ಕೆ ಸಾಧ್ಯ. ಈ ಸಭೆಯನ್ನು ಇಷ್ಟೊಂದು ನಿರ್ಲಕ್ಷ ಮಾಡುವುದು ಸರಿಯಲ್ಲ. ತಾವು ಸಹ ಮಂತ್ರಿಗಳಿಗೆ ಅನೇಕ ಸಲ ಎಚ್ಚರಿಕೆಯನ್ನು ಕೊಟ್ಟಿದ್ದೀರಿ. ಅದರೂ ಮಂತ್ರಿಗಳು ಈ ಸಭೆಯ ಕಾರ್ಯಕಲಾಪಗಳು ನಡೆಯುವ ಕಾಲುದಲ್ಲಿ ಹಾಜರಿರದೆ ಈ ಸಭೆಗೆ ಅಗೌರವ ಸೂಚಿಸುವುದು, ಅಸಡ್ಡೆ ಮಾಡುವುದು ನಡೆಯುತ್ತಿದೆ. ತಮ್ಮ ಕಡೆ ೧೬೫ ಜನರಿರುವುದ ಹೇಗೂ ರಾಜ್ಯಭಾರ ನಡೆಯುಕೊಂಡು ಹೋಗುತ್ತದೆ ಎಂದು ತಿಳಿದುಕೊಂಡರೆ ಹೇಗೆ ? ಇಂತಹ ಒಂದು ಪರಿಸ್ಥಿತಿ ಹಿಂದೆ ಅನೇಕ ಸಲ ಉದ್ಭವವಾಗಿದೆ. ಇದರೂ ಅವರು ಸಭೆಗೆ ಗೌರವ ಕೊಡುತ್ತಿಲ್ಲ. ಇದನ್ನು ತಾವು ಯಾವಾಗ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಿಳಿಸಬೇಕು.

MADAM SPEEKAR.—I Shall send notice to the Government. We will take up the matter tomorrow.

(iii) Re-Loss of Potato Crop in Chikmagalore District:—

SRI G. PUTTASWAMY.— (Mudigere) I call the attention of the Hon'ble Minister for Agriculture and Forest to the loss of potato crop due to heavy rain in Chickmangalur District.

SRI S. M. KRISHNA:—(Minister for Industries) On behalf of the Minister for Agriculture I State as follows.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಳೆಯ ಆಧಾರದ ಬೆಳೆಯಾಗಿ ಈ ಸಾರಿ ೨೬೭೨ ಎಕರೆಗಳಲ್ಲಿ ಆಲೂಗೆಡ್ಡೆಯನ್ನು ಬೆಳೆಯಲಾಗಿತ್ತು. ಇದರಲ್ಲಿ ೧೨೦೦ ಎಕರೆ ಚಿಕ್ಕಮಗಳೂರು ಹೋಬಳಿಯಲ್ಲೂ, ೪೦೦ ಎಕರೆ ಜಾಗದ ಹೋಬಳಿಯಲ್ಲೂ ಮತ್ತು ೧೦೭೨ ಎಕರೆಗಳನ್ನು ಅಂಬಳೆ ಹೋಬಳಿಯಲ್ಲೂ ಬೆಳೆಯಲಾಗಿದೆ.

ತೋಟಗಾರಿಕೆ ಇಲಾಖೆಯು ಆಲೂಗೆಡ್ಡೆ ಬೆಳೆಯುವ ರೈತರಿಗೆ ಸಸ್ಯ ಸಂರಕ್ಷಣೆಯ ವಿಷಯವಾಗಿ ಕರಪತ್ರಗಳ ಮೂಲಕವಾಗಿಯೂ ಮತ್ತು ಸ್ಥಳೀಯ ದಿನ ಪತ್ರಿಕೆಗಳ ಮೂಲಕವಾಗಿಯೂ ಮುಂಜಾಗರೂಕತೆ ಕ್ರಮಗಳನ್ನು ತಿಳಿಸಿದೆ.

ಆಲೂಗೆಡ್ಡೆಗೆ ತಗಲುವ "ಲೇಟ್ ಬ್ಲೈಟ್" ರೋಗಕ್ಕೆ ಸಿಂಪಡಿಸಲು ಕೆಲವು ಔಷಧಿಗಳನ್ನು ಶೇಕಡ ೫೦ರಷ್ಟು ಸಬ್ಸಿಡಿ ಮೂಲಕವಾಗಿಯೂ ಕೆಲವನ್ನು ಪೂರ್ಣ ಬೆಲೆಗೆ ರೈತರಿಗೆ ಇಲಾಖೆಯ ಮುಖಾಂತರ ಒದಗಿಸಲಾಗಿದೆ.

ಇಲಾಖೆಯ ಸಿಬ್ಬಂದಿಯವರು ರೈತರ ಜಮೀನುಗಳಲ್ಲಿ ಸಸ್ಯ ಸಂರಕ್ಷಣೆಯಲ್ಲಿ ನಿರತರಾಗಿದ್ದಾರೆ. ಮತ್ತು ಅವರೂ ಇನ್ನೂ ಸಹ ಕಾರ್ಯನಿರತರಾಗಿಯೇ ಇದ್ದಾರೆ.

ಈಗ ವಿಪರೀತ ಮಳೆಯಿಂದಾಗಿ, ಹಾಕಿದ ಬೆಳೆಯಲ್ಲಿ ಶೇಕಡ ೩೫ರಷ್ಟು ಭಾಗ ನಷ್ಟ ಆಗಿದೆ. ಆಲೂಗೆಡ್ಡೆ ಬೆಳೆಗೆ ಪೂರ್ಣ ನಷ್ಟ ಆಗಿದೆ ಎಂಬುದು ಸರಿಯಲ್ಲ.

ಶೇಕಡ ೩೫ರ ನಷ್ಟಕ್ಕೆ ಕಾರಣ ಏನೆಂದರೆ, ವಿಪರೀತ ಮಳೆ, ರೋಗಪೀಡಿತ ಬೀಜಗಳನ್ನು ಉಪಯೋಗಿಸಿರುವುದು ಮತ್ತು ಕಪ್ಪು ಮಣ್ಣಿನ ಗದ್ದೆ ಜಮೀನುಗಳಲ್ಲಿ ಸರಿಯಾಗಿ ನೀರು ಹೋಗಲು ಚರಂಡಿಗಳನ್ನು ಏರ್ಪಡಿಸದೆ ಇರುವುದು ಮುಖ್ಯ ಕಾರಣ.

ಈಗ ಉಂಟಾಗಿರುವ ನಷ್ಟವು ಈ ರೀತಿ ನೀರು ಬಸಿದು ಹೋಗಲು ಚರಂಡಿಗಳನ್ನು ಏರ್ಪಡಿಸದೆ ಬೆಳೆದಿರುವ ಗದ್ದೆ ಜಮೀನುಗಳಲ್ಲಿ ಆಗಿದೆ.

ಹೀಗಾಗಿ, ಮಳೆ ಬರುತ್ತಿರುವಾಗ ಔಷಧಿ ಸಿಂಪಡಿಸುವ ಕಾರ್ಯ ಸಾಧ್ಯವಾಗಲಿಲ್ಲ. ಏಕೆಂದರೆ ಆ ರೀತಿ ಮಾಡಿದ್ದರೂ ಸಹ ಮಳೆಯಿಂದಾಗಿ ಔಷಧಿಗಳು ತೊಡೆದು ಹೋಗುವುದೆಂದ ಅದರ ಪರಿಣಾಮ ಏನೂ ಆಗುವುದಿಲ್ಲ. ಮಳೆ ನಿಂತ ತಕ್ಷಣವೇ ಇಲಾಖೆಯ ಸಿಬ್ಬಂದಿಯವರು ಆಲೂಗೆಡ್ಡೆ ಬೆಳೆದ ಜಮೀನು ಗಳಿಗೆ ಭೇಟಿ ಕೊಟ್ಟು ಖುದ್ದಾಗಿ ಔಷಧಿ ಸಿಂಪಡಿಸುವ ಕಾರ್ಯವನ್ನು ಮಾಡಿದ್ದಾರೆ. ಮತ್ತು ಅವರು ಇನ್ನೂ ಸಹ ಕಾರ್ಯನಿರತರಾಗಿಯೇ ಇದ್ದಾರೆ.

ತೋಟಗಾರಿಕೆ ಇಲಾಖೆಯು ಆಲೂಗೆಡ್ಡೆ ಬೆಳೆಗಾರರಿಗೆ ಸೂಕ್ತ ಮುಂಜಾಗರೂಕತೆಯನ್ನು ಕೊಟ್ಟಿದೆ. ಮತ್ತು ಸಸ್ಯ ಸಂರಕ್ಷಣೆಯಲಿ ಪೂರ್ಣವಾಗಿ ಸಹಕರಿಸಿದೆ.

ಈ ಮೇಲೆ ಹೇಳಿದಂತೆ ಶೇಕಡ ೩೫ ಭಾಗ ಹಾನಿಯಾಗಿರುವುದನ್ನು ಬಿಟ್ಟರೆ, ಉಳಿದ ಎಲ್ಲಾ ಕಡೆ ಗಳಲ್ಲಿಯೂ ಪಸಲು ಚೆನ್ನಾಗಿದೆ ಮತ್ತು ಅವರಿಗೆ ಆಲೂಗೆಡ್ಡೆ ಫಸಲನ್ನು ಕೀಳಲಾಗುತ್ತಿದೆ.

ಶ್ರೀ ಜಿ. ಪುಟ್ಟಸ್ವಾಮಿ:—ಆಲೂಗೆಡ್ಡೆ ಬೆಳೆ ಪೂರ್ಣವಾಗಿ ನಷ್ಟವಾಗಿಲ್ಲ ಎಂದು ಮಾನ್ಯ ಮಂತ್ರಿ ಗಳು ಈಗ ಏನು ಹೇಳಿಕೆ ಕೊಟ್ಟರು ಅದು ಸತ್ಯಕ್ಕೆ ದೂರವಾಗಿದೆ. ಅಧಿಕಾರಿಗಳಿಂದ ತರಿಸಿಕೊಂಡಿರುವ ಈ ಹೇಳಿಕೆಯಲ್ಲಿ ಯಾವ ಸತ್ಯಾಂಶವೂ ಇಲ್ಲದೆಂದು ಹೇಳುತ್ತೇನೆ. ಜುಲೈ ತಿಂಗಳಿನಲ್ಲಿಯೇ ಸುಮಾರು ಒಂದೂ ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಆಲೂಗೆಡ್ಡೆ ನಷ್ಟವಾಗಿದೆ. ನಮ್ಮ ಜಿಲ್ಲೆಯಲ್ಲಿಯೇ ಅಲ್ಲದೆ, ಹಾಸನ ಮುಂತಾದ ಅನೇಕ ಜಿಲ್ಲೆಗಳಲ್ಲಿ, ಅಂದರೆ ಎಲ್ಲೆಲ್ಲಿ ಇದನ್ನು ಬೆಳೆಯುತ್ತಾರೋ ಆಲ್ಲೆಲ್ಲಾ ನಷ್ಟವಾಗಿದೆ. ಮಳೆ ಹೇರಳವಾಗಿ ಬರುವುದರಿಂದ ಏಸ್‌ದಮ್ ನಷ್ಟವಾಗಿಬಿಡುತ್ತದೆ. ಇದರ ಬಗೆ ಸ್ವಾಭಾವಿಕವಾಗಿ ಮುಂಜಾಗರೂಕತಾ ಕ್ರಮವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆ ಪ್ರಶ್ನೆ ಇಲ್ಲಿ ಉದ್ಭವವಾಗುವುದೇ ಇಲ್ಲ. ಈ ರೀತಿ ಅನಿರೀಕ್ಷಿತ ಮಳೆ ಬಂದು ಕೋಟ್ಯಾಂತರ ರೂಪಾಯಿಗಳಷ್ಟು ಬೆಳೆ ಬಾಳುವ ಮಾಲು ನಷ್ಟವಾಗಿ ರೈತರಿಗೆ ತೊಂದರೆಯಾಗಿರುವುದರಿಂದ ಅವರಿಗೆ ಸಾಲ ವಗೈರೆ ಮುಂಜೂರು ಮಾಡಿ, ಕಂದಾಯವನ್ನು ಮಾಫಿ ಮಾಡುವುದಕ್ಕೆ ಕಾರ್ಯಕ್ರಮ ಕೈಗೊಳ್ಳುತ್ತೀರಾ ? ಈ ಮೂಲಕ ರೈತರಿಗೆ ರಕ್ಷಣೆ ಕೊಡುತ್ತೀರಾ ಎಂಬುದೇ ನನ್ನ ಪ್ರಶ್ನೆ ?

ಶ್ರೀ ಸಿ. ಬೈರೇಗೌಡ :—ನಮ್ಮ ಕೋಲಾರ ಜಿಲ್ಲೆಯಲ್ಲಿಯೂ ಸಹ ಆಲೂಗೆಡ್ಡೆಯನ್ನು ಬೆಳೆಯು ಲಾಗುತ್ತಿದೆ. ಈ ಬೆಳೆ ನಮ್ಮ ಜಿಲ್ಲೆಯಲ್ಲಿಯೂ ಹಾಳಾಗಿದೆ. ಇದಕ್ಕೆ ಲೇಟ್ ಬ್ಲೈಟ್ ರೋಗವೇ ಕಾರಣ ಎಂದು ಮಾನ್ಯ ಮಂತ್ರಿಗಳು ತಿಳಿಸಿದರು ಈ ರೋಗ ಈ ವರ್ಷ ಮಾತ್ರ ಬಂದಿಲ್ಲ. ಪ್ರತಿ ವರ್ಷವೂ ಬರುತ್ತಿದೆ. ಈ ರೋಗ ಬರುವುದಕ್ಕೆ ಕಾರಣವೇನು ಮತ್ತು ಇದನ್ನು ತಡೆಗಟ್ಟುವುದು ಹೇಗೆ ಎಂಬ ಬಗ್ಗೆ ಸರ್ಕಾರದವರು ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ಬೆಳೆ ನಷ್ಟಕ್ಕೆ ಕಪ್ಪು ಮಣ್ಣಿನ ಗದ್ದೆಯಲ್ಲಿ ಸರಿಯಾಗಿ ನೀರು ಹೋಗಲು ಚರಂಡಿಗಳನ್ನು ಏರ್ಪಡಿಸದೇ ಇರುವುದೇ ಎಂದು ಕಾರಣ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಆದು ಸರಿ ಯಲ್ಲ. ರೈತರಿಗೆ ಇಲಾಖೆಯವರಿಗಿಂತ ಹೆಚ್ಚು ಅನುಭವ ಇದೆ. ಅವರು ನೂರಾರು ವರ್ಷಗಳಿಂದ ಬೆಳೆಯುತ್ತಿದ್ದಾರೆ. ಆದರೆ ಈ ಅಂಶ ಸತ್ಯಕ್ಕೆ ದೂರವಾಗಿವ. ಮುಖ್ಯವಾಗಿ ಈ ರೋಗ ಬರುವುದಕ್ಕೆ ಕಾರಣವೇನು ಎಂಬ ಬಗ್ಗೆ ತನಿಖೆ ಮಾಡಿ ಅದು ಇನ್ನು ಮುಂದೆ ಬಾರದ ಹಾಗೆ ಸರ್ಕಾರ ಕಾರ್ಯಕ್ರಮ ಕೈ ಕೊಳ್ಳಬೇಕೆಂದು ಸೂಚನೆ ಮಾಡುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ:—ಈ ಬೆಳೆ ನಷ್ಟವಾಗಲು ರೋಗ ಪೀಡಿತ ಬೀಜಗಳನ್ನು ಉಪ ಯೋಗಿಸಿರುವುದು ಕಾರಣ ಎಂದು ಮಾನ್ಯ ಮಂತ್ರಿಗಳು ಏನು ಹೇಳಿಕೆ ಕೊಟ್ಟಿದ್ದಾರೆ ಅದು ನಿಜವಾವ ಸಂಗತಿಯಾಗಿದೆ. ನಮ್ಮ ಜಿಲ್ಲೆಯಲ್ಲಿ ಈ ಬೆಳೆ ಹಾಳಾಗುವುದಕ್ಕೆ ಇದೇ ಕಾರಣ. ಸುಮಾರು ೨೫ ಸಾವಿರ ಎಕರೆಗಳಲ್ಲಿ ರೋಗ ಪೀಡಿತ ಬೀಜಗಳನ್ನ ಹಾಕಿದ್ದರಿಂದ ಬೆಳೆ ಎಲ್ಲವೂ ಹಾಳಾಗಿದೆ. ಈ ರೀತಿ ಬೀಜಗಳನ್ನು ಹಂಚಬಾರದು ಎಂದು ಸರ್ಕಾರದಟ್ಟಿಗವಂನಕ್ಕೆ ಆಗಾಗ್ಗೆ ತಂದರೂ ಸಹ ಸರ್ಕಾರದವರು ಒಳ್ಳೆಯ ಬಿತ್ತನೆ ಬೀಜಗಳನ್ನು ಒದಗಿಸುವುದಕ್ಕೆ ಯಾವ ವಿಧವಾದ ಕಾರ್ಯಕ್ರಮವನ್ನು ಸಹ ಹಾಕಿಕೊಂಡಿಲ್ಲ. ಇದರಿಂದ ಲಕ್ಷಾಂತರ ಜನ ಕೈಹಾಳಾಗುತ್ತಿದ್ದಾರೆ ಆದ್ದರಿಂದ ಸರ್ಕಾರದವರು ರೈತರಿಗೆ ದೋಷರಹಿತ ಬೀಜವನ್ನು ಒದಗಿಸುವುದಕ್ಕೆ ಏರ್ಪಾಡುಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ,—ಅಲ್ಲಿ ಆಲೂಗಡ್ಡೆ ಬೆಳೆ ಹಾಳಾಗುವುದಕ್ಕೆ ಮೂರು ಕಾರಣಗಳನ್ನು ನಮೂದು ಮಾಡಿದ್ದಾರೆ. ದೋಷರಹಿತ ಬೀಜವನ್ನು ಒದಗಿಸದೇ ಇರುವುದು. ಹೆಚ್ಚು ಮಳೆ ಬಂದದ್ದು, ಮತ್ತು ಲೇಟ್‌ಬ್ಲೈಟ್ ಎಂಬ ರೋಗ ಈ ಬೆಳೆಗೆ ತಗಲಿರುವುದು. ಈ ಲೇಟ್‌ಬ್ಲೈಟ್ ರೋಗ ಬಂದರೆ ಏನೂ ಮಾಡುವುದಕ್ಕೆ ಬರುವುದಿಲ್ಲ. ಇದಕ್ಕೆ ಒಂದು ವೇಳೆ ಔಷಧಿಯನ್ನು ಸಿಂಪಡಿಸಿದರೆ ಮಳೆ ಬಂದರೆ ಅದು ಕೊಚ್ಚಿ ಹೋದರೆ ಹಣ ವ್ಯರ್ಥವಾಗುತ್ತದೆ. ಆದರಿಂದ ಯಾವ ವಿಧವಾದ ಅನುಕೂಲವೂ ಆಗುವು

(ಶ್ರೀ ಎಸ್. ಎಂ. ಕೃಷ್ಣ)

ದಿಲ್ಲ. ಆದ್ದರಿಂದ ಈ ಬಗ್ಗೆ ಸರ್ಕಾರಕ್ಕೆ ತೀವ್ರವಾದ ಕಳಕಳಿ ಇದೆ. ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕೋಟ್ಯಾಂತರ ರೂಪಾಯಿ ಆಲೂಗಡ್ಡೆಯನ್ನು ಬೆಳೆಯುತ್ತಾರೆ. ಆದ್ದರಿಂದ ಆ ಪ್ರದೇಶಗಳಲ್ಲಿ ಈ ಆಲೂಗಡ್ಡೆ ಬೆಳೆಗೆ ತೀವ್ರವಾದ ತೊಂದರೆಯಾಗಿದೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಧಿಕಾರಿಗಳು ಮಾಡಿರುವ ಅಂದಾಜಿನ ಪ್ರಕಾರ ಸೇಕಡಾ ೩೫ ರಷ್ಟು ಎಂದರೆ ಸುಮಾರು ೨೦-೨೫ ಲಕ್ಷ ರೂಪಾಯಿಗಳಷ್ಟು ನಷ್ಟ ಆಗಬಹುದು ಎಂದು ನಾನು ತಿಳಿದುಕೊಂಡಿದ್ದೇನೆ

ಶ್ರೀ ಎಚ್. ಡಿ. ದೇವೇಗೌಡ.—ಈ ಆಲೂಗಡ್ಡೆಯ ವಿಚಾರದಲ್ಲಿ ನಾನು ಒಂದು ವಿಷಯವನ್ನು ಹೇಳುತ್ತೇನೆ. ದೋಷರಹಿತ ಬೀಜವನ್ನು ಒದಗಿಸುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ ಕಾರಣ ವೇನೆಂದರೆ ಕೇಂದ್ರದ ವ್ಯವಸಾಯ ಇಲಾಖೆಯ ಕಾರ್ಯವ್ಯಾಪ್ತಿಯಲ್ಲಿ ಕೂಡ ಸಿಲೋನ್‌ನಿಂದ ದೋಷರಹಿತ ಬಿತ್ತನೆ ಬೀಜವನ್ನು ಪಡೆಯುವುದಕ್ಕೆ ಸಾಧ್ಯವಾಗಿಲ್ಲ ಎನ್ನುವ ಆರೋಪಣೆಯನ್ನು ನಾನು ಮಾಡಿದರೆ ಮಾನ್ಯ ಮಂತ್ರಿಗಳು ಅನ್ಯಥಾ ಭಾವನೆ ಮಾಡಬಾರದು. ಇದರ ಹಿಂದೆ ಹಿತಾಸಕ್ತಿಗಳ ಕೈವಾಡ ಇದೆ. ಆದ್ದರಿಂದ ಈಗ ಸುಮಾರು ೨೦ ವರ್ಷಗಳಿಂದ ನಮ್ಮ ರಾಜ್ಯಕ್ಕೆ ದೋಷರಹಿತ ಆಲೂಗಡ್ಡೆ ಬಿತ್ತನೆ ಬೀಜವನ್ನು ಪಡೆಯುವುದಕ್ಕೆ ಸಾಧ್ಯವಾಗಿಲ್ಲ. ಈ ರೀತಿ ಆಲೂಗಡ್ಡೆ ಬೆಳೆ ನಷ್ಟವಾಗುವುದಕ್ಕೆ ಮೂಲ ಕಾರಣ ದೋಷರಹಿತ ಬಿತ್ತನೆ ಬೀಜ ದೊರಕದೆ ಇರುವುದು. ಇದನ್ನು ಸರಿಪಡಿಸುವ ಪರಿಸ್ಥಿತಿದೆಯೇ ಹೇಗೆ ? ಇಲ್ಲದೇ ಹೋದರೆ ಆಲೂಗಡ್ಡೆಯನ್ನು ಹಾಕುವುದನ್ನು ಕೈಬಿಡಬೇಕು ಎಂದು ರೈತರಿಗೆ ಹೇಳುವುದು ಒಳ್ಳೆಯದು.

ಶ್ರೀ ಎಸ್. ಎಂ. ಕೃಷ್ಣ.—ಈಗ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂತಹ ವಿಚಾರವನ್ನು ಸರ್ಕಾರದವರು ಗಮನಿಸುತ್ತಾರೆ. ದೋಷರಹಿತ ಬೀಜವನ್ನು ಸರಬರಾಜು ಮಾಡುವುದಕ್ಕೆ ಸಂಬಂಧ ಪಟ್ಟವರೊಡನೆ ವ್ಯವಹಾರ ಮಾಡುತ್ತೇವೆ ವ್ಯವಸಾಯ ಇಲಾಖೆಯ ಮಾನ ಮಂತ್ರಿಗಳಾದ ಶ್ರೀ ಕೆ. ಎಚ್. ಪಾಟೀಲರು ಈಗ ಆಲೂಗಡ್ಡೆ ಬೆಳೆ ನಷ್ಟವಾಗಿರತಕ್ಕ ಭಾಗದಿಂದ ಬಂದಿರತಕ್ಕ ಸದಸ್ಯರೊಡನೆ ಸಮಾಲೋಚನೆ ಮಾಡಿ ಆ ಬಗ್ಗೆ ಏನು ಸುಧಾರಣೆ ಮಾಡಬೇಕು ಎಂಬುದನ್ನು ಕುಳಿತುಕೊಂಡು ಚರ್ಚೆ ಮಾಡಿ ನಂತರ ಕ್ರಮ ತೆಗೆದುಕೊಳ್ಳುತ್ತಾರೆ.

Arrest and Release of a Member.—Announcement

MADAM SPEAKER.—I have received a communication dated 17th August 1972 from the Superintendent of Police, Bangalore District. stating that Sri Konandur Lingappa, Hon'ble Member of this House who was arrested on 15th August 1972 was convicted and sentenced to imprisonment by the I Class Magistrate, Ramanagaram, till the raising of the Court on 16th August 1972 and the that he was released on 16th August 1972 at 5-30 P.M.

Relase of a forest lands for Agricutural purposes

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ ಈಗ ತಾವು ಏನು ಹೇಳಿದಿರಿ ಈ ಸಂಬಂಧದಲ್ಲಿ ನಾನು ಎರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಈಗ ಅರಣ್ಯ ಮಂತ್ರಿಗಳು ಇನ್ನು ಹೇಳುತ್ತಾರೆ ಎಂದರೆ ಅರಣ್ಯ ಭೂಮಿಯನ್ನು ಬಿಡುಗಡೆ ಮಾಡುವದಿಲ್ಲ ಎಂದು ಹೇಳುತ್ತಾರೆ.

ಅಧ್ಯಕ್ಷರು.—ಇವೊತ್ತು ಇಲ್ಲಿ ಈಗ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಲ್ಲ :

ಶ್ರೀ ಕೋಣಂದೂರು ಲಿಂಗಪ್ಪ —ಕಂದಾಯ ಮಂತ್ರಿಗಳು ಇದ್ದಾರೆ ಅವರೇ ಸಾಕು. ಈಗ ಅರಣ್ಯ ಶಾಖೆಯ ಮಂತ್ರಿಗಳು ಏನು ಹೇಳುತ್ತಾರೆ ಎಂದರೆ ಬೇಸಾಯಕ್ಕೆ ಯೋಗ್ಯವಾದ ಅರಣ್ಯ ಭೂಮಿಯನ್ನು

ಬಿಡುಗಡೆ ಮಾಡುವುದಿಲ್ಲ ಎಂದು ಹೇಳುತ್ತಾರೆ. ಮಲೆನಾಡಿನಲ್ಲಿ ಅರಣ್ಯ ಭೂಮಿಯನ್ನು ಕೇಳುವವರೇ ಇಲ್ಲ. ಮಲೆನಾಡಿನಲ್ಲಾಗಲೀ ಅಥವಾ ಬೇರೆ ಕಡೆಯಲ್ಲಾಗಲೀ ಬೇಸಾಯಕ್ಕೆ ಯೋಗ್ಯವಾದ ಕಾಡು ಇಲ್ಲದೆ ಇರುವ ಜಮೀನನ್ನು ವ್ಯವಸಾಯಕ್ಕೆ ಭೂಮಿ ಇಲ್ಲದೇ ಇರುವವರಿಗೆ ಕೊಡಿ ಎಂದು ನಮ್ಮ ಸೋಷಲಿಸ್ಟ್ ಪಾರ್ಟಿ ಹುಟ್ಟಿದ ಲಾಗಾಯಿತು ಅರ್ಜಿ ಕೊಡುತ್ತಾ ಬಂದಿದೆ. ಭೂ ರಹಿತ ಗೇಣಿದಾರರಿಗೆ ಭೂಮಿಯನ್ನು ಕೊಡಿ ಎಂದು ನಾವು ಹೇಳುತ್ತಾ ಬಂದಿದ್ದೇವೆ. ರಾಮನಗರ ತಾಲ್ಲೂಕು ಹಂದಿಗುಂಡಿ ಅರಣ್ಯ ಪ್ರದೇಶದಲ್ಲಿ ಸುಮಾರು ೫ ಸಾವಿರ ಎಕರೆ ಜಮೀನು ವ್ಯವಸಾಯಕ್ಕೆ ಯೋಗ್ಯವಾದ ಜಮೀನು ಇದೆ. ಚನ್ನಪಟ್ಟಣ ತಾಲ್ಲೂಕಿನಲ್ಲಿ ಕೆಲವು ಕಡೆ ಅರಣ್ಯ ಭೂಮಿ ವ್ಯವಸಾಯಕ್ಕೆ ಯೋಗ್ಯವಾದ ಜಮೀನು ಇದೆ. ಈ ಪ್ರದೇಶವನ್ನು ಭೂಹೀನ ರೈತರಿಗೆ ಹಂಚಬೇಕು ಎಂದು ನಾವು ಮೊನ್ನೆ ದಿವಸ ಚಳುವಳಿ ಮಾಡಿದಾಗ.....

ಅಧ್ಯಕ್ಷರು.—ಇದನ್ನೆಲ್ಲಾ ಹೇಳಬೇಕಾದರೆ ನೋಟೀಸ್ ಕೊಟ್ಟು ಹೇಳಬೇಕು.

ಶ್ರೀ ಬೋಣಂ ನೂರು ಲಿಂಗಪ್ಪ.—ಇವೊತ್ತು ನೋಟೀಸು ಕೊಡುತ್ತೇವೆ. ಭೂಹೀನ ರೈತರಿಗೆ, ಗೇಣಿದಾರರಿಗೆ ಬೇಸಾಯಕ್ಕೆ ಯೋಗ್ಯವಾದ ಅರಣ್ಯ ಭೂಮಿಯನ್ನು ಕೊಡಬೇಕು ಎಂದು ನಮ್ಮ ಸೋಷಲಿಸ್ಟ್ ಪಾರ್ಟಿಯವರು ಮೊದಲಿನಿಂದಲೂ ಹೇಳುತ್ತಾ ಬಂದಿದ್ದೇನೆ. ಮಾನ್ಯ ಮಂತ್ರಿಗಳು ಆ ಅರಣ್ಯ ಪ್ರದೇಶಕ್ಕೆ ಯಾವಾಗ ಬೇಕಾದರೂ ಬಂದು ನೋಡಿ. ಅಲ್ಲಿ ಕಾಡು ಇಲ್ಲ. ಅದು ಬೇಸಾಯಕ್ಕೆ ಯೋಗ್ಯವಾಗಿದೆ. ಅಂಥಾ ಜಮೀನನ್ನು ಭೂಹೀನ ರೈತರಿಗೆ ಕೊಡಿ ನಮ್ಮ ಮಲೆನಾಡಿನಲ್ಲಿಯೂ ಕೂಡ ಬೇಸಾಯಕ್ಕೆ ಯೋಗ್ಯವಾದ ಅರಣ್ಯ ಭೂಮಿ ಇದೆ. ಅದನ್ನೂ ಸಹ ಸರ್ಕಾರದವರು ಪರಿಶೀಲನೆ ಮಾಡಿ ಭೂಹೀನ ರೈತರಿಗೆ ಕೊಡುವ ವ್ಯವಸ್ಥೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

Hunger strike by the Students of the Veterinary College in Bangalore

ಶ್ರೀ ವಾಟಾಳ್ ನಾಗರಾಜ್.—ವಿಧಾನ ಸೌಧದ ಮುಂಭಾಗದಲ್ಲಿ ವೆಟರ್‌ನರಿ ಕಾಲೇಜಿನ ವಿದ್ಯಾರ್ಥಿಗಳು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಈಗ ಇಲ್ಲಿ ಪಶುಸಂಗೋಪನಾ ಶಾಖೆಯ ಮಂತ್ರಿಗಳು ಇದ್ದಾರೆ. ಆ ಬಗ್ಗೆ ಅವರು ಒಂದು ಹೇಳಿಕೆಯನ್ನು ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು.—ಅದು ನಿನ್ನೆಯೇ ಮುಗಿದಿದೆ.

ಶ್ರೀ ವಾಟಾಳ್ ನಾಗರಾಜ್.—ಅದು ಇನ್ನೂ ಇತ್ಯರ್ಥವಾಗಿಲ್ಲ. ಅವರು ೪ ದಿವಸಗಳಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅದನ್ನು ಬಗೆಹರಿಸದಿದ್ದರೆ ತೀವ್ರವಾದ ಕೆಟ್ಟ ಪರಿಣಾಮ ಉಂಟಾಗುತ್ತದೆ. ಪರಿಸ್ಥಿತಿ ಇನ್ನೂ ಉಲ್ಬಣವಾಗುತ್ತದೆ. ಈಗಾಗಲೇ ೪-೫ ಜನ ವಿದ್ಯಾರ್ಥಿಗಳ ಪರಿಸ್ಥಿತಿ ತೀವ್ರವಾಗಿ ಹದಗೆಟ್ಟಿದೆ. ಆದ್ದರಿಂದ ಇದನ್ನು ಬಗೆಹರಿಸದಿದ್ದರೆ ಇನ್ನಷ್ಟು ಕೆಟ್ಟ ಪರಿಣಾಮವಾಗುತ್ತದೆ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಸ್ಪಷ್ಟವಾದ ನಿಲುವನ್ನು ಹೇಳಬೇಕು.

ಅಧ್ಯಕ್ಷರು.—ಅದನ್ನು ನಿನ್ನೆಯ ದಿವಸವೇ ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಮಾನ್ಯ ಮಂತ್ರಿಗಳು ಏನು ಈ ವಿಚಾರದಲ್ಲಿ ಹೇಳಿಕೆ ಕೊಟ್ಟಿದ್ದಾರೆ ಎಂದು ನಮಗಿಂತ ಆ ವೆಟರ್‌ನರಿ ಕಾಲೇಜ್ ವಿದ್ಯಾರ್ಥಿಗಳಿಗೆ ಸಮಜಾಯಿಷಿಯಾಗಿಲ್ಲ. ಆ ವಿದ್ಯಾರ್ಥಿಗಳು ಇನ್ನೂ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಹೋರಾಟ ಮಾಡುತ್ತಿದ್ದಾರೆ. ಈ ರೀತಿ ಆದರೆ ಇದು ಯಾವ ರೀತಿ ಮುಕ್ತಾಯವಾಗಬೇಕು. ಅವರು ಏತಕ್ಕೆ ಉಪವಾಸ ಮಾಡುತ್ತಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಈ ಬಗ್ಗೆ ಏನಾದರೂ ಒಂದು ಕ್ರಮವನ್ನು ತೆಗೆದುಕೊಳ್ಳಬೇಕು. ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಹೇಳಿದ ಹಾಗೆ ಈಗಾಗಲೇ ಕೆಲವರ ಪರಿಸ್ಥಿತಿ ಚಿಂತಾಜನಕವಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಅಲ್ಲಿ ಉಪವಾಸ ಮಾಡುತ್ತಿರುವ ವೆಟರ್‌ನರಿ ವಿದ್ಯಾರ್ಥಿಗಳನ್ನು ಕರೆಸಿ ಮಾತನಾಡಿ ಅದನ್ನು ಇತ್ಯರ್ಥ ಮಾಡಿದರೆ ಒಳ್ಳೆಯದು. ಅಥವಾ ಮಾನ್ಯ ಮಂತ್ರಿಗಳೇ ಆ ವಿದ್ಯಾರ್ಥಿಗಳು ಉಪವಾಸ ಸತ್ಯಾಗ್ರಹ ಮಾಡುವ ಸ್ಥಳಕ್ಕೆ ಹೋಗಿ ನೋಡಿಕೊಂಡು ವಿದ್ಯಾರ್ಥಿಗಳನ್ನು ಮಾತನಾಡಿಸಿಕೊಂಡು ಬಂದರೆ ಒಳ್ಳೆಯದು.

Statement of the Minister of state Animal Husabandry *Re* six Veterinary College Students

Matter expnge as ordered by the Chair.

ಶ್ರೀ ಎನ್. ಚಿಕ್ಕೇಗೌಡ (ಪಶುಸಂಗೋಪನಾ ಶಾಖೆಯ ರಾಜ್ಯ ಮಂತ್ರಿಗಳು).—ಸ್ವಾಮಿ, ನಿನ್ನೆಯ ದಿವಸ ಈ ಸಭೆಯಲ್ಲಿ ವೆಟರಿನರಿ ವಿದ್ಯಾರ್ಥಿಗಳು ಉಪವಾಸ ಮಾಡಿದ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಹಾಗೆ ಪ್ರಸ್ತಾಪ ಮಾಡಿದಾಗ ಆದು ಆಗಂವುದಿಲ್ಲವೆಂದು ಹೇಳಿಲ್ಲ. ಟನೇ ಆಯೋಗದವರ ಮುಂದೆ ಸಂಬಂಧಪಟ್ಟ ಕೆಟಗರಿಯವರ ಈ ವಿಚಾರವನ್ನು ಇಡುವುದರ ಬಗ್ಗೆ ಸರ್ಕಾರ ಯೋಚನೆ ಮಾಡುತ್ತಿದೆ ಅಂದ ಮೇಲೆ ಇದನ್ನು ಕೂಲಂಕಷವಾಗಿ ವಿಚಾರ ಮಾಡಬೇಕಾಗುತ್ತದೆ. ಅಲ್ಲದೆ ಒಮ್ಮೆಲೇ ಆದರಲ್ಲಿ ಏನಾದರೂ ಇತ್ಯರ್ಥ ಮಾಡುವುದಕ್ಕಾಗುವುದಿಲ್ಲ. ಈ ಕೆಟಗರಿಯಲ್ಲಿ ೫ ಸಾವಿರ ಚಿಲ್ಲರೆ ಜನರು ಇದ್ದಾರೆ ಅದರಂದು ಎಷ್ಟು ಖರ್ಚು ಬೀಳುತ್ತದೆ ಎಂಬುದನ್ನೆಲ್ಲಾ ಲೆಕ್ಕ ಹಾಕಿ ಟನೇ ಹಣಕಾಸಿನ ಆಯೋಗದವರ ಮುಂದೆ ಇಟ್ಟು ಮಾಡಬೇಕಾಲ್ಲದೆ. ಪೀಸ್ ಮೀಲಾಗಿ ಒಬ್ಬೊಬ್ಬರಿಗೆ ಮಾಡುವುದಕ್ಕಾಗುವುದಿಲ್ಲ. ಆದರೂ ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸುತ್ತದೆ ಎಂದು ಹೇಳಿದ್ದೇನೆ. ಆದಲ್ಲದೆ ನಿವತ್ತು ಸಾಯಂಕಾಲ ವಿದ್ಯಾರ್ಥಿಗಳ ಪರವಾಗಿ ಒಬ್ಬರನ್ನು ಭೇಟಿ ಮಾಡಬೇಕೆಂದು ಕೇಳಿಕೊಂಡ ಪ್ರಕಾರ ಅವರಿಗೆ ಭೇಟಿಗೆ ಅವ ಕಾಶ ಕೊಟ್ಟಿದ್ದೇವೆ. ಆಗ ಅವರು ಏನು ಹೇಳುತ್ತಾರೆಂಬುದನ್ನು ಕೇಳಿಕೊಂಡು, ಸರ್ಕಾರದ ಅಭಿಪ್ರಾಯ ವನ್ನು ಸಹ ತಿಳಿಸಲು ಸಾಧ್ಯವಾಗುತ್ತದೆ ಮತ್ತು ಅವರು ಉಪವಾಸವನ್ನು ವಾಪಸ್ಸು ತೆಗೆದುಕೊಳ್ಳ ಬೇಕೆಂದು ಸಭೆಯ ಮೂಲಕ ಪ್ರಾರ್ಥನೆ ಮಾಡಿಕೊಂಡಿದ್ದೇನೆ. ಆದ್ದರಿಂದ ವಿದ್ಯಾರ್ಥಿಗಳ ಬಗ್ಗೆ ತಮಗೆ ಎಷ್ಟು ಆಸಕ್ತಿ ಇದೆಯೋ ಅಷ್ಟೇ ಆಸಕ್ತಿ ಸರ್ಕಾರಕ್ಕೂ ಇದೆ ಎಂಬುದನ್ನು ಇಲ್ಲಿ ಹೇಳುತ್ತೇನೆ. ಅವರ ಹಣಕಾಸಿನ ಪರಿಸ್ಥಿತಿಯ ಬಗ್ಗೆ ತಮಗೆಲ್ಲರಿಗೂ ಗೊತ್ತಿದೆ. ಸರ್ಕಾರವು ಹಣಕಾಸಿನ ಬಗ್ಗೆ ಓವರ್‌ಡ್ರಾಫ್ಟ್ ಮತ್ತು ಅಭಾವ ಪರಿಸ್ಥಿತಿ, ಇತ್ಯಾದಿ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಆದ್ದರಿಂದ ಸ್ವಲ್ಪ ತೊಂದರೆಯಾಗಿದೆ.

ಶ್ರೀ ಕೊಣಂದೂರು ಲಿಂಗಪ್ಪ.—ನಿಮಗೆ ಅವರನ್ನು ಡಾಕ್ಟರು ಎಂದು ಡಿಗ್ರಿ ಹಾಕಿಕೊಂಡು ಕರೆಯು ವುದಕ್ಕೆ ಏನು ಹಣಕಾಸಿನ ತೊಂದರೆ ಇದೆ ?

ಶ್ರೀ ಎನ್. ಚಿಕ್ಕೇಗೌಡ.—ಅದರ ಬಗ್ಗೆ ಏನೂ ತೊಂದರೆಯಿಲ್ಲ. ಅವುಗಳೆಲ್ಲದರ ಬಗ್ಗೆ ನಿವತ್ತು ಅವರನ್ನು ಕರೆದು ಮಾತನಾಡುತ್ತೇನೆ. ಅದೇ ರೀತಿ ಅವರಿಗೆ ಕೊಡುವ ಪ್ರೊಮೋಶನ್ಸ್ ಇತ್ಯಾದಿ ಬಗ್ಗೆ ಬಜೆಟ್ ಸೆಷನ್ನಿನಲ್ಲಿಯೂ ಹೇಳಿದ್ದೇನೆ. ಆದ್ದರಿಂದ ಅವರ ಕೇಳಿಕೆಗಳನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿಲ್ಲ. ಸಕಾದಲ್ಲಿ ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೇನೆ. ಅದೇ ರೀತಿ ಸಾಯಂ ಕಾಲ ಆ ವಿಚಾರದಲ್ಲಿ ಮಾತನಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಸರ್ಕಾರಕ್ಕೆ ಹಣಕಾಸಿನ ತೊಂದರೆ ಯಾವಾಗಲೂ ಇದ್ದೇ ಇದೆ.

Road Accidents by the B. T. S. in Bangalore

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೆ, ಹಿಂದೆ ಅನೇಕ ಸಾರಿ ಈ ರಸ್ತೆ ಅಪ ಘಾತಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿದ್ದೆ. ಅದಕ್ಕೆ ಮಾನ್ಯ ಆಜೀಜ್‌ಸೇಠರು ಉತ್ತರ ಕೊಟ್ಟಿದ್ದರು ಮತ್ತು ಮಾನ್ಯ ಮುಖ್ಯಮಂತ್ರಿಯವರು ಸಹ ಉತ್ತರ ಹೇಳಿದ್ದರು. ನಿನ್ನೆಯ ದಿವಸ ಮಾರ್ಕಿಂ ಆಸ್ಪತ್ರೆಯ ಮುಂದೆ ಒಂದು ಅಪಘಾತವಾಗಿದೆ. ಆದರಲ್ಲಿ ಒಬ್ಬ ಶ್ರೀಧರ್ ಎನ್ನುವ ೨೧ ವರ್ಷದ ಫೈನಲ್ ಬಿಎಸ್‌ಸಿ ಯಲ್ಲಿ ಓದುತ್ತಿರುವ ಯುವಕ ಸತ್ತಿದ್ದಾನೆ. ಇನ್ನೊಬ್ಬ ಗಾಯವಾಗಿ ಆಸ್ಪತ್ರೆಗೆ ಸೇರಿಕೆ ಆಂಡಿದ್ದಾನೆ. ಒಂದು ಎಂಎಸ್‌ಆರ್‌ಟಿಸಿ ಬಸ್ ಇಬ್ಬರು ಹುಡುಗರಿಗೆ ಡ್ಯಾಶ್ ಹೊಡೆದು ಒಂದು ಆಟೋ ರಿಕ್ಷದ ವಿಂಡ್ ಸ್ಕ್ರೀನ್ ಮೇಲೆ ಬಿದ್ದು ಆ ಹುಡುಗ ಸತ್ತು ಹೋಗಿದ್ದಾನೆ. ಇಂತಹ ಅಪಘಾತಗಳನ್ನು ತಪ್ಪಿಸುವುದರಲ್ಲಿ ಪೋಲೀಸರು ಸಹ ವಿಫಲರಾಗಿದ್ದಾರೆ. ಪೋಲೀಸ್ ಇಲಾಖೆಯವರು ದಕ್ಷತೆಯಿಂದ ಕೆಲಸ ಮಾಡುತ್ತಾ ಇಲ್ಲ. ಹೋದ ಸಾರಿಯೂ ಕೆಲವು ದಿವಸಗಳ ಹಿಂದ ಇದೇ ಸ್ಥಳದಲ್ಲಿ ಒಂದು ಬಿಟಿಎಸ್ ಬಸ್ ಮಾರಕ್ಕೆ ಡಿಕ್ಕಿ ಹೊಡೆದು ಬಿಟ್ಟು ಎಷ್ಟೋ ಜನರಿಗೆ ಗಾಯವಾಗಿದೆ. ಒಂದು ಕಡೆ ಫ್ಯಾಮಿಲಿ ಪ್ಲಾನಿಂಗ್ ಮಾಡಿ ಎಂದು ಹೇಳುತ್ತಿದ್ದೀರಿ ಇನ್ನೊಂದು ಕಡೆ ದೊಡ್ಡ ದೊಡ್ಡ ಮನುಷ್ಯರನ್ನು ಮತ್ತು ಯುವಕರನ್ನು ಸಾಯಿಸುತ್ತಿದ್ದೀರೆ. ಆದ್ದರಿಂದ ಇಂತಹ ಘಟನೆಗಳನ್ನು ನಿಲ್ಲಸದೆ ಹೋದರೆ ಬೆಂಗಳೂರಿನ ನಾಗರೀಕರು ಈ ಬಿಟಿಎಸ್ ಬಸ್ ಮತ್ತು ಎಂಎಸ್‌ಆರ್‌ಟಿಸಿ ಬಸ್ಸುಗಳು ಸಿಟಿಯಲ್ಲಿ ಓಡಾಡದಂತೆ ಎಂದು ಚಳವಳಿ

ಮಾಡಬೇಕಾಗಿ ಬರುತ್ತದೆ. ಅಲ್ಲದೆ ಬಿಟಿಎಸ್ ಬಸ್ಸುಗಳು ಸಿಟಿಯೆಲ್ಲಿ ಓಡದಂತೆ ಮಾಡುವ ಕಾಲ ಬರುತ್ತದೆ. ಆದ್ದರಿಂದ ಸರ್ಕಾರದವರು ಜನರಿಗೆ ರಕ್ಷಣೆ ಕೊಟ್ಟು ಇಂತಹ ಅಪಘಾತಗಳು ನಡೆಯದಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಜೀರೋ ಅವರಿನಲ್ಲಿ ಪ್ರಸ್ತಾಪ ಮಾಡಿದರೂ, ಅದಕ್ಕೆ ಸಂಬಂಧಪಟ್ಟ ಯಾವ ಮಂತ್ರಿಯೂ ಇಲ್ಲಿ ಇಲ್ಲ.

ಅಧ್ಯಕ್ಷರು.—ಜೀರೋ ಅವರ್ ಎಂದು ಪ್ರತ್ಯೇಕವಾಗಿ ಏನೂ ಇಲ್ಲ. ಏನಾದರೂ ಅತ್ಯಂತ ಮುಖ್ಯ ಮತ್ತು ಪ್ರಾಣ ಹೋಗುವಂತಹ ಪರಿಸ್ಥಿತಿ ಇದ್ದರೆ ಅದನ್ನು ಹೇಳಬೇಕಾಗುತ್ತದೆಂದು ಅದಕ್ಕೆ ಜೀರೋ ಅವರ್ ಎಂದು ಕರೆಯುವುದು. ಅದೂ ಅಲ್ಲದೆ ಮೇಲ್ಮನೆ ಸಹ ನಡೆಯುತ್ತಿರುವುದರಿಂದ ಮಂತ್ರಿಗಳು ಅಲ್ಲಿಯೂ ಇರಬೇಕಾಗುತ್ತದೆ. ಇದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಅದು.

ಶ್ರೀ ಎಚ್. ಡಿ. ದೇವೇಗೌಡ.—ಅಲ್ಲಿಯೂ ಇಲ್ಲದಿದ್ದರೆ ಏನು ಮಾಡುತ್ತೀರಿ ?

ಶ್ರೀ ಕೆ. ಎಂ. ನಾಗಣ್ಣ.—ಅದಕ್ಕೋಸ್ಕರವೇ ಇದನ್ನು ಒಂದು ಗಂಟೆಗೆ ಪ್ರಾರಂಭ ಮಾಡಿ ಎರಡೂ ಕಾಲು ಗಂಟೆಗೆ ಅದನ್ನು ಪ್ರಾರಂಭ ಮಾಡುತ್ತಿರುವುದು. ಇವತ್ತು ಸಹ ಒಂದು ಗಂಟೆಗೆ ಇಲ್ಲಿ ಸಂಬಂಧಪಟ್ಟ ಯಾವ ಮಂತ್ರಿಯೂ ಇರಲಿಲ್ಲ. ಈಗ ಒಂದು ಕಷ್ಟದ ಪರಿಸ್ಥಿತಿ ಬಂದಿರುವಾಗ ಇದನ್ನು ಜೀರೋ ಅವರಿನಲ್ಲಿ ಹೇಳಬೇಕಾಯಿತು. ಯಾರಿಗೇ ಆಗಲಿ ಒಬ್ಬ ೨೧ ವಯಸ್ಸಿನ ಬಿಎಸ್‌ಸಿ ಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿ ಸತ್ತರೆ ಅವರ ತಂದೆ-ತಾಯಿಗಳಿಗೆ ಎಷ್ಟು ವ್ಯಥೆ ಮತ್ತು ಸಂಕಟವಾಗಲಾರದು. ನಮಗಿಂತ ತಮಗೆ ಇದರಲ್ಲಿ ಹೆಚ್ಚು ಅನುಕಂಪ ಬರಬೇಕು. ಏಕೆಂದರೆ ತಮ್ಮ ಹೃದಯ ನಮ್ಮ ಹೃದಯಕ್ಕಿಂತ ಮೆದುವಾದುದು. ಈ ರೀತಿ ಬಸ್ಸುಗಳು ಕಲಿಯುತ್ತಿರುವ ಯುವಕ ವಿದ್ಯಾರ್ಥಿಗಳನ್ನು ಕೊಂದು ಹಾಕಿದರೆ ಯಾರಿಗೆ ತಾನೆ ದುಃಖವಾಗಲಾರದು ? ಆದ್ದರಿಂದ ತಕ್ಷಣ ಇಂತಹ ಅಪಘಾತಗಳನ್ನು ತಪ್ಪಿಸದೆ ಹೋದರೆ ಮತ್ತು ಸರ್ಕಾರದವರು ಇದರ ಬಗ್ಗೆ ಏನೂ ಹೇಳದಿದ್ದರೆ ವಾಸ್ತವಿಕವಾಗಿ ಬೆಂಗಳೂರಿನ ನಾಗರೀಕರು ಒಂದು ಚಳವಳಿಯನ್ನೇ ಮಾಡಿ ಈ ಬಿ ಟಿ.ಎಸ್. ಬಸ್ಸುಗಳು ನಗರದಲ್ಲಿ ಓಡಾಡದಂತೆ ಮಾಡುವ ಪರಿಸ್ಥಿತಿ ಬರುತ್ತದೆ, ಮತ್ತು ಅದನ್ನು ತಾವು ಎದುರಿಸಬೇಕಾಗುತ್ತದೆ.

3-00 P. M.

ಶ್ರೀ ಎಸ್. ಎಂ. ಕೃಷ್ಣ:—ಮಾನ್ಯ ಶ್ರೀ ನಾಗಣ್ಣನವರು ನಮ್ಮ ಹಿರಿಯ ಸದಸ್ಯರು. ಅವರು ಏನು ಹೇಳಿದರೂ ಕೂಡ ಸರ್ಕಾರದವರು ಬಹಳ ತೀವ್ರವಾಗಿ ಅವರು ಹೇಳತಕ್ಕ ಮಾತುಗಳನ್ನು ಕೇಳುತ್ತಾರೆ. ಅಪಘಾತಗಳು ಆಗುತ್ತಾ ಇರತಕ್ಕದ್ದು ನಮಗೂ ಸಮಾಧಾನ ತರತಕ್ಕ ವಿಚಾರವಲ್ಲ. ಅದರಲ್ಲಿಯೂ ಬೆಂಗಳೂರು ಅಭಿವೃದ್ಧಿಯಾಗಿ ದಿನೇ ದಿನೇ ಬೆಳೆಯುತ್ತಾ ಇರತಕ್ಕ ಪಟ್ಟಣ. ಆದ್ದರಿಂದ ಈ ಪಟ್ಟಣದಲ್ಲಿ ಅಪಘಾತಗಳ ಸಂಖ್ಯೆಯನ್ನು ಕಡಿಮೆಮಾಡುವುದಕ್ಕೆ ಕಳೆದ ಕೆಲವಾರು ವರ್ಷಗಳಿಂದ ಸರ್ಕಾರ ಕೆಲವು ಕಮಗಳನ್ನು ತೆಗೆದುಕೊಂಡಿರುವುದನ್ನು ಮಾನ್ಯ ಮುಖ್ಯಮಂತ್ರಿಗಳು ಈಗಾಗಲೆ ತಿಳಿಸಿದ್ದಾರೆ.

ಶ್ರೀ ಕೆ. ಎಂ. ನಾಗಣ್ಣ:—ನಾನು ಹಿಂದೆಯೇ ಈ ಸ್ಥಳದಲ್ಲಿ ಎರಡು ದಿವಸಗಳಿಗೆಂದು ಸಾರಿ ಅಪಘಾತಗಳು ಸಂಭವಿಸುತ್ತಾ ಇವೆ. ಟ್ರಾಫಿಕ್ ಬಹಳಜಾಸ್ತಿ. ನೂರಾರು ಜನರು ಓಡಾಡುವ ಸ್ಥಳ. ಅಲ್ಲಿಗೆ ಒಬ್ಬ ಪೊಲೀಸ್ ಕಾನ್‌ಸ್ಟೇಬಲ್ ಹಾಕಿ ಎಂದು ಸುಮಾರು ಮೂರು ತಿಂಗಳ ಹಿಂದೆಯೇ ಬರೆದಿದ್ದೆ. ಆದರೆ ಇದುವರೆಗೆ ಪೋಲೀಸ್ ಇಲಾಖೆ ಅದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ನನ್ನ ಹೇಳಿಕೆಯ ಮೇಲೆ ಆ ಸ್ಥಳದಲ್ಲಿ ಒಬ್ಬ ಕಾನ್‌ಸ್ಟೇಬಲ್‌ನನ್ನು ಹಾಕಿ ಟ್ರಾಫಿಕ್ ಕಂಟ್ರೋಲ್ ಮಾಡಿದರೆ ಅಪಘಾತಗಳು ಕಡಿಮೆಯಾಗುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ:—ಮಾನ್ಯ ಸದಸ್ಯರ ಸೂಚನೆಯನ್ನು ಗಮನಿಸಲಾಗುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್.—ನಮ್ಮ ಸಂಸ್ಥಾನದಲ್ಲಿರತಕ್ಕ ಬಸ್ಸುಗಳ ಪೈಕಿ ಅನೇಕ ಬಸ್ಸುಗಳಿಗೆ ಬ್ರೇಕ್ ಇಲ್ಲ, ಹಾರನ್ ಇಲ್ಲ. ಡ್ರೈವರುಗಳು ಹಾಗೆಯೇ ನಡೆಸುತ್ತಾರೆ. ಅವುಗಳನ್ನು ಬ್ರೇಕ್, ಹಾರನ್ ಇಲ್ಲದೆ ನಡೆಸಿದರೆ ಹೇಗೆ? ಒಟ್ಟಿನಲ್ಲಿ ಎಲ್ಲೂ ಅಪಘಾತಗಳು ಆಗದೇ ಇರುವಹಾಗೆ ಸರ್ಕಾರ ನೋಡಿಕೊಳ್ಳಬೇಕು.

ಶ್ರೀ ಎಸ್. ಎಂ. ಕೃಷ್ಣ.—ಅದನ್ನು ಗಮನಿಸುತ್ತೇವೆ.

FAMINE CONDITIONS IN HASSAN DUE TO FAILURE OF RAINS

ಶ್ರೀ ಕೆ. ಎಚ್. ಹನುಮೇ ಗೌಡ (ಹಾಸನ).—ಮಾನ್ಯ ಅಧ್ಯಕ್ಷರೇ, ಕಳೆದ ೨ ತಿಂಗಳುಗಳಿಂದಲೂ ಹಾಸನ ಜಿಲ್ಲೆಯಲ್ಲಿ ಮಳೆ ಬೀಳದೆ ಲಕ್ಷಾಂತರ ಎಕರೆ ಬೆಳೆ ಹಾಳಾಗಿ ಹೋಗಿದೆ. ಸುಮಾರು ಆರೇಳು ವರ್ಷಗಳಿಂದಲೂ ಮಳೆ, ಬೆಳೆ ಹೋಗಿ ಲಕ್ಷಾಂತರ ರೂಪಾಯಿಗಳಷ್ಟು ದುಡ್ಡನ್ನು ಕ್ಷಾಮ ಪರಿಹಾರ ಫಂಡಿನಿಂದ ಸರ್ಕಾರದವರು ಕೊಡುತ್ತಿದ್ದಾರೆ. ಒಂದು ಕಷ್ಟವೇನೆಂದರೆ, ಈ ರೀತಿ ದುಡ್ಡು ಕೊಡುತ್ತಾ ಇರುವುದು ನನ್ನ ಗಮನಕ್ಕೆ ಬಂದಿಲ್ಲ. ಸುಮಾರು ೪ ಕೋಟಿ ರೂಪಾಯಿಗಳಷ್ಟು ಆಲೂಗಡ್ಡೆ ಬೆಳೆ ಈಗ ಹಾಳಾಗಿ ಹೋಗಿದೆ. ಲಕ್ಷಾಂತರ ಎಕರೆಗಳಲ್ಲಿ ರಾಗಿ, ಜೋಳ ಬೆಳೆಯೂ ಸಹ ಪೂರ್ಣವಾಗಿ ಹಾಳಾಗಿ ಹೋಗಿದೆ. ಇನ್ನು ಕೇವಲ ನಾಲ್ಕೈದು ದಿವಸಗಳು ಮಾತ್ರ ಆಸೆಂಬ್ಲಿ ಇರುತ್ತದೆ. ನಾಳೆಯಿಂದ ಕೆಲಸಗಳು ಆರಂಭಮಾಡಬೇಕಾಗಿರುವುದರಿಂದ ಹಾಸನ ಜಿಲ್ಲೆಯಲ್ಲಿರತಕ್ಕ ಪರಿಸ್ಥಿತಿಯನ್ನು ನೋಡಲು ಅಲ್ಲಿಗೆ ಹೋಗಿ ಅಲ್ಲಿ ನೊಂದಿರತಕ್ಕ ರೈತರಿಗೆ ಜೀವನಕ್ಕೆ ಆಧಾರವಾಗಿ ಯಾವುದಾದರೂ ಕೆಲಸಕಾರ್ಯಗಳನ್ನು ಪರಂ ಮಾಡಿಸಬೇಕು. ಕ್ಷಾಮ ಪರಿಹಾರ ನಿಧಿಯಿಂದ ಅಲ್ಲಿಗೆ ಸಾಕಾದಷ್ಟು ಹಣವನ್ನು ಕೊಡಬೇಕು.

ಇನ್ನೊಂದು ವಿಚಾರ. ರೈತರು ಈ ಗಾಗಲೇ ಸಾಲಸೋಲ ಮಾಡಿ ತಮ್ಮ ವಿಶಿಷ್ಟವನ್ನು ಜಮೀನಿಗೆ ಹಾಕಿ ಎಲ್ಲವನ್ನೂ ಕಳೆದುಕೊಂಡು ನಿರುದ್ಯೋಗಿಗಳಾಗಿದ್ದಾರೆ. ಬೇರೆಕಡೆಗಳಲ್ಲಿ ಮಳೆಬೆಳೆ ಇಲ್ಲದೆ ಇದ್ದುದನ್ನು ಕಳೆದುಕೊಂಡು ಕೇವಲ ಗೊಬ್ಬರ ಹಾಕಿದ್ದಾರೆ, ಬೀಜವನ್ನು ಬಿತ್ತಿದ್ದಾರೆ. ಮಳೆ ಇಲ್ಲದ ವ್ಯವಸಾಯಮಾಡುವುದು ಕಷ್ಟವಾಗಿದೆ ಇವತ್ತಿನದಿವಸ ಬರೀ ಹಳ್ಳಿಗೆ ಹೋಗಿ ವ್ಯವಸಾಯಮಾಡಿದರೆ ಕೇವಲ ೨ ಆಣೆ ಬೆಳೆಗೂ ಆವಕಾವಿಲ್ಲದೆ ಬಡ ಜನರು ಕಂಗಾಲು ಆಗಿದ್ದಾರೆ. ಆದ್ದರಿಂದ ಮಾನ್ಯ ಸಚಿವರು ಹಾಸನ ಜಿಲ್ಲೆಗೆ ಭೇಟಿ ಕೊಟ್ಟು ಇದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವವರನ್ನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಈಗ ರಾಜ್ಯದ ನಾಲ್ಕೈದು ಜಿಲ್ಲೆಗಳನ್ನು ಬಿಟ್ಟರೆ ಉಳಿದ ಎಲ್ಲಾ ಭಾಗಗಳಲ್ಲಿಯೂ ತೊಂದರೆ ಒಂದು ಕಡೆ ಹೆಚ್ಚಾಗಿರಬಹುದು ಅಥವಾ ಕಡಿಮೆ ಯಾಗಿರಬಹುದು.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮೈಸೂರು ಜಿಲ್ಲೆಯಲ್ಲಿ ವಿಶೇಷ ಪರಿಸ್ಥಿತಿ ಇದೆ ಅಲ್ಲಿಯೂ ಬಹಳ ಅಭಾವ ಪರಿಸ್ಥಿತಿ ಉಂಟಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾಲ್ಕು ಜಿಲ್ಲೆಗಳು ಅಂದರೆ, ಅದರಲ್ಲಿ ತಮ್ಮ ಜಿಲ್ಲೆಯ ಕೆಲವು ಪ್ರದೇಶಗಳೂ ಸೇರಿವೆ. ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಮತ್ತು ಕೊಡಗು ಈ ನಾಲ್ಕನ್ನು ಬಿಟ್ಟರೆ ಉಳಿದ ಜಿಲ್ಲೆಗಳಲ್ಲಿ ಬಹಳವಾಗಿ ತೊಂದರೆಯಾಗಿದೆ ಎಂಬುದಂ ಸರ್ಕಾರಕ್ಕೆ ಗೊತ್ತಿದೆ. ಬಹಳ ತೀವ್ರತೆಯಿಂದ ಅಭಾವವಿರುವ ಪ್ರದೇಶಗಳಿಗೆ ಹೋಗಿ ನನ್ನ ಮಾನ್ಯ ಸಹೋದ್ಯೋಗಿ ಸಚಿವರು ಕೆಲವು ಭಾಗಗಳು ನೋಡಿಕೊಂಡು ಬಂದಿದ್ದಾರೆ. ಈಗಾಗಲೇ ಅಲ್ಲಲ್ಲಿ ಹಣವನ್ನು ಸಾಕಾದಷ್ಟು ಒದಗಿಸಿ ಕೆಲಸಕಾರ್ಯಗಳನ್ನು ಚೆನ್ನಾಗಿ ನಡೆಯುವ ಹಾಗೇ ಏರ್ಪಾಡು ಮಾಡಿದ್ದಾರೆ. ಉಳಿದ ಜಿಲ್ಲೆಗಳ ಪರಿಸ್ಥಿತಿಯನ್ನು ನೋಡಿ ರೂಪಾಯಿನಲ್ಲಿ ೧೪ ಆಣೆಯಷ್ಟು ಕೆಲಸವಾಗಲು ಕೆಲವು ಜಿಲ್ಲೆಗಳಿಗೆ ಸಾಕಾದಷ್ಟು ಹಣವನ್ನು ಒದಗಿಸಿದೆ. ಅಂತಹ ಜಿಲ್ಲೆಗಳಿಗೆ ಎಷ್ಟೆಷ್ಟು ಹಣ ಬೇಕೆಂಬುದನ್ನೂ ಸಹ ತಿಳಿಸಿದ್ದಾರೆ. ಈ ಸಭೆಯ ಅವಧಿ ಮುಗಿದ ಕೂಡಲೇ ಭಾಗಗಳಿಗೆ ನಾನಾಗಲೀ ಅಥವಾ ಇತರೇ ಸಚಿವರಾಗಲೀ ಹೋಗಿ ನೋಡಿ ಸೂಕ್ತ ಪರಿಹಾರವನ್ನು ಒದಗಿಸಲಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಮಂತ್ರಿಗಳು ಹೇಳಿದರು. ಸರ್ಕಾರದವರು ಹಣ ಒದಗಿಸುತ್ತಾರೆಂದು. ಆದರೆ ಅಧಿಕಾರಿಗಳು ಅದನ್ನು ಬಡ ಜನರಿಗೆ ಹಂಚುವಾಗ ಅವರಿಗೆ ಸರಿಯಾಗಿ ತಲುಪಿಸುತ್ತಾ ಇಲ್ಲ. ತಾವು ಪ್ರವಾಸಮಾಡಿದಮೇಲೆ ಪ್ರಜಾವಾಣಿಯಿಂದ ಎಲ್ಲೋವರದಿಯಾಗಿದೆ. ಆದ್ದರಿಂದ ಅದರ ಬಗ್ಗೆ ತಾವು ಅಸಕ್ತಿ ವಹಿಸಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಾರೋ ಒಬ್ಬರು ಅವರ ಪಕ್ಷದವರು ಆ ರೀತಿಯಾಗಿ ಹೇಳಿರಬಹುದು. ಅದರ ಜೊತೆಗೆ ನಾವೇ ಅಲ್ಲಿಗೆ ಖುದ್ದು ಹೋಗಿ ಹಣ ಕೊಟ್ಟು ಕೆಲಸಗಳನ್ನು ಪ್ರಾರಂಭ ಮಾಡಿದ್ದಾರೆಂದೂ ಹೇಳಿದರೆ, ತಾವು ಅದನ್ನು ನಂಬದೇ ಇದ್ದರೆ, ನಾನೇನು ಮಾಡುವುದು?

SCARCITY CONDITIONS IN SOME DISTRICT OF THE STATE

ಶ್ರೀ ಬಾಪುಗೌಡ ರಾಯಪ್ಪ (ಶಹಾಬಾದ್).—ಮಾನ್ಯ ಅಧ್ಯಕ್ಷರೇ, ಹುಮ್ನಾಬಾದಿನಲ್ಲಿ ಹುಲಸ ನಾಡಿನ ಹತ್ತಿರ ಶ್ರೀ ಪಾರ್ವತಿರಾವ್ ಅವರ ಮಗ ಸೂರ್ಯಭಾನು ಎಂಬುವರು ಸೊಸೈಟಿ ಮಾಡಿಕೊಂಡು ಬಡ್ಡಿ ಇಲ್ಲದೆ ಸಾಲವನ್ನು ಕೊಟ್ಟು ಅಲ್ಲಿ ವ್ಯಾಪಾರ ಮಾಡುತ್ತಿದ್ದಾರೆ. ಸಾವಿರಾರು ಜನರು ಅಲ್ಲಿಗೆ ಬಂದು ಕೆಲಸಕೊಡಿ ಎಂದು ಕೇಳುತಿದ್ದಾರೆ ಬಸ್ಸುಗಳಲ್ಲಾದರ ಕೆಲಸಕೊಡಿಸಿ ಎಂದು ಕೊಳುತ್ತಿದ್ದಾರೆ. ಅನೇಕ ಜನರಿಂತಲ್ಲಿ ಕೆಲಸವಿಲ್ಲದೆ ಕಂಗಾಲಾಗಿ ತಹಸೀಲ್ದಾರರಿಂದು ಘೇರಾವೋ ಮಾಡುತ್ತಿದ್ದಾರೆ. ಆ ಪ್ರದೇಶದಲ್ಲಿ ಸುಮಾರು ೮ ಸಾವಿರ ಜನರು ಕೆಲಸಕೊಡಿ ಎಂದು ಕೇಳುತ್ತಿದ್ದಾರೆ.

ಇದರಲ್ಲಿ ಎಷ್ಟರಮಟ್ಟಿಗೆ ಸತ್ಯವಿದೆಯೆಂಬುದನ್ನು ತಿಳಿದುಕೊಂಡು ತೀವ್ರ ಪರ್ಯಾಲೋಚನೆ ಮಾಡುತ್ತಿರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಮಾಡುತ್ತೇನೆ.

ಶ್ರೀ ಕೆ ಬಿ. ಶಿವಯ್ಯ (ನಂಜನಗೂಡು — ಮೈಸೂರಿನಲ್ಲಿ ನಂಜನಗೂಡು ಸಬ್ ಡಿವಿಷನ್‌ನಲ್ಲಿ ಜೋಳದ ಬೆಳೆ ಹಾಳಾಗಿ ಹೋಗಿದೆ. ಕುಡಿಯುವುದಕ್ಕೂ ನೀರಿಲ್ಲದೆ ಗುತ್ತಾ ಇಲ್ಲ. ಇದರಬಗ್ಗೆ ಹೆಚ್ಚಿನ ತೀವ್ರ ಗಮನಕೊಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಅದರ ಬಗ್ಗೆ ಗಮನಕೊಡಲಾಗುತ್ತದೆ.

ಶ್ರೀ ಬಿ. ಪುಟ್ಟಸಾಮಯ್ಯ (ಸಿರಾ).—ಬೆಂಗಳೂರು ಜಿಲ್ಲೆಯ ರಾಮನಗರ ತಾಲ್ಲೂಕಿನ ಪರಿಸ್ಥಿತಿ ಅದರಲ್ಲಿಯೂ ಕೆಲವು ಪ್ರದೇಶಗಳು ಹೋಪ್‌ಲೆಸ್ ಆಗಿದೆ. ಇನ್ನೂ ಸರಿಯಾಗಿ ಬಿತ್ತನೆ ಆಗಲಿಲ್ಲ. ಆದ್ದರಿಂದ ಅಲ್ಲಿಗೂ ಕೂಡ ಸ್ವಲ್ಪ ಹಣ ಒದಗಿಸಿ ಕೊಡಬೇಕು. ಕೂಲಿ ಹಣ ಹೆಚ್ಚಿಗೆಸಿಗುವ ಹಾಗೇ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದೇ ಸಂದರ್ಭದಲ್ಲಿ ಕೆಲವು ಪ್ರದೇಶಗಳಲ್ಲಿ ರಾಗಿ ಬೆಳೆಗೆ, ಕಡಲೇಕಾಯಿ ಬೆಳೆಗೆ ಹುಳುಗಳು ಬಿದ್ದಿವೆ. ರೈತನಾದವನು ಅದಕ್ಕೆ ಔಷದಿ ಹಾಕಿ ತಡೆಗಟ್ಟಿದರೂ ಆಗುತ್ತಾ ಇಲ್ಲ ಆದ್ದರಿಂದ ಸರ್ಕಾರದವರು ಒಂದು ಮಾಸ್ ಪ್ರೋಗ್ರಾಂ ಹಾಕಿಕೊಂಡು ಔಷಧಿಯನ್ನು ಸಿಂಪಡಿಸುವುದಕ್ಕೆ ಒಂದು ವ್ಯವಸ್ಥೆ ಮಾಡಬೇಕು ನಮ್ಮ ಪ್ರದೇಶದ ಆಭಾವ ಸ್ಥಿತಿಯ ಕಡೆಗೂ ಸಂಬಂಧಪಟ್ಟ ಮಂತ್ರಿಗಳು ಗಮನಕೊಟ್ಟು ಅದನ್ನು ತಡೆಗಟ್ಟಬೇಕೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ. ನಾನು ಮೊದಲೇ ಹೇಳಿದ ಹಾಗೆ ಆ ನಾಲ್ಕು ಜಿಲ್ಲೆಗಳನ್ನು ಬಿಟ್ಟು ಉಳಿದ ಎಲ್ಲಾ ಕಡೆಗಳಲ್ಲಿಯೂ ಅದರ ಬಗ್ಗೆ ಗಮನಕೊಟ್ಟಿದ್ದಾರೆ. ಸರ್ಕಾರದವರು ಅದಕ್ಕೆ ಸಾಕಷ್ಟು ಹಣವನ್ನು ಒದಗಿಸಿಕೊಟ್ಟು ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದಾರೆ. ಮಾನ್ಯ ಸ್ನೇಹಿತ ರೊಬ್ಬರು ಒಬ್ಬ ಮನುಷ್ಯ ಬಾಲ್ಕಿ ಹುಮನಾಬಾದಿನಲ್ಲಿ ಆತ್ಮಹತ್ಯ ಮಾಡಿಕೊಂಡಿದ್ದಾನೆ ಎಂದು ಹೇಳಿದರು ಅದಕ್ಕೆ ಏನೂ ಸಾಕ್ಷಿ ಸಿಗುವುದಿಲ್ಲ. ಅದು ಕಷ್ಟ.

ಮಾನ್ಯ ಶ್ರೀ ಬಾಪುಗೌಡ ಅವರು ಹೇಳಿದ ವಿಷಯವನ್ನು ಚೆನ್ನಾಗಿ ತಿಳಿದು ಅದಕ್ಕೇನು ಮಾಡಬೇಕೆಂಬ ಬಂದನ್ನು ಈ ಸಭೆಗೆ ತಿಳಿಸಬೇಕಾಗಿದೆ. ಅಲ್ಲಿಯೂ ಕೂಡ ಕೆಲಸಗಳನ್ನು ಪ್ರಾರಂಭ ಮಾಡಿದ್ದಾರೆ. ಸಾಕಾದಷ್ಟು ಹಣವನ್ನು ಒದಗಿಸಿದ್ದೇವೆ. ಅಲ್ಲಿ ೭-೮ ಸಾವಿರ ಜನರು ಅಲ್ಲಿನ ತಹಸೀಲ್ದಾರರನ್ನು ಘೇರಾವೊ ಮಾಡಿದ್ದಾರೆ. ಅವರ ಆಫೀಸಿಗೆ ಮುತ್ತಿಗೆ ಹಾಕಿದ್ದಾರೆಂದು ಹೇಳಿದರು. ಈ ವಿಷಯ ತಿಳಿದು ಸಭೆಗೆ ತಿಳಿಸುತ್ತೇನೆ. ನನಗೆ ತಿಳಿದಿರುವ ಪ್ರಕಾರ, ಅಲ್ಲಿನ ಕೆಲಸಕಾರ್ಯಗಳ ಬಗ್ಗೆ ಅನೇಕ ಕೆಲಗಳನ್ನು ಈಗ ಪ್ರಾರಂಭಮಾಡಿದ್ದಾರೆ. ಇನ್ನೂ ಹೆಚ್ಚುಮಾಡುವುದಕ್ಕೆ ಸಾಕಷ್ಟು ಹಣವನ್ನು ಒದಗಿಸಿದ್ದೇವೆ, ಎಷ್ಟರ ಮಟ್ಟಿಗೆ ಅಲ್ಲಿ ಕೆಲಸಕಾರ್ಯಗಳನ್ನು ಮಾಡಿದ್ದಾರೆಂಬುದನ್ನು ನಾನು ತಿಳಿದು ಈ ಸಭೆಗೆ ಬೇಕಾದರೆ ತಿಳಿಸುತ್ತೇನೆ. ಮೈಸೂರಿನ ಕೆಲವು ಭಾಗ ಅದರಲ್ಲಿಯ ೂ ರಾಮನಗರದಲ್ಲಿ ಅಭಾವ ಪರಿಸ್ಥಿತಿ ಇದೆಯೆಂದು ಹೇಳಿದ್ದಾರೆ. ಅಲ್ಲಿಗೂ ಹಣವನ್ನು ಒದಗಿಸಿದ್ದೇವೆ. ಅಲ್ಲಿ ಕೆಲಸಗಳನ್ನು ಎಷ್ಟು ತೆಗೆದು ಗೊಂಡಿದ್ದಾ ರೆಂಬುದನ್ನು ತಿಳಿದು ನಾನು ಹೇಳಬೇಕಾಗಿದೆ. ಒಟ್ಟಿನಲ್ಲಿ ಈ ವಿಷಯದಲ್ಲಿ ಸರ್ಕಾರದವರು ಹೆಚ್ಚಿನ ಆಸ್ಥೆ ವಹಿಸಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾರೆ ಎಂಬುದಾಗಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

NOMINATIONS OF ONE SRI K.K. MURTHY TO SEVERAL COMMI TTEE OF GOVERNMENT.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಅಧ್ಯಕ್ಷರೇ, ಸರ್ಕಾರದವರು ಒಂದು ವಿಚಾರದಲ್ಲಿ ಬಹಳ ತಪ್ಪು ನಡಯುತ್ತಿದ್ದಾರೆ. ಒಬ್ಬ ವ್ಯಕ್ತಿಯನ್ನು ಉದ್ದೇಶವಾಗಿ ಫೀಲ್ಡ್ ಮಾಡುತ್ತಿದ್ದಾರೆ, ಈ ವಿಚಾರ.....

ಅಧ್ಯಕ್ಷರು.—ತಾವು ಈ ವಿಷಯದಲ್ಲಿ ಒಂದು ಅಡ್ಜೆರ್ನಮೆಂಟ್ ಮೋಷನ್ ತಂದು ಇಲ್ಲಿ ಚರ್ಚೆಗೆ ಅವಕಾಶ ಕೇಳಿದ್ದಿರಿ. ಅದಕ್ಕೆ ಸಾಧ್ಯವಿಲ್ಲ ಎಂದು ತಮಗೆ ಉತ್ತರ ಕಳುಹಿಸಿದ್ದೇನೆ.....

ಶ್ರೀ ವಾಟಾಳ್ ನಾಗರಾಜ್.—ನಾನು ಹೇಳುತ್ತಿರುವುದು ಆ ಕೆ. ಕೆ. ಮೂರ್ತಿ ವಿಚಾರ ಆತ ಒಬ್ಬ ದೊಡ್ಡ ಬ್ಲಾಕ್ ಮಾರ್ಕಟಿಯರ್ ಮಾನ್ಯ ಮುಖ್ಯ ಮಂತ್ರಿಗಳು ಮತ್ತೆ ನೆನ್ನೆಯ ದಿವಸ ಅದೇ ವ್ಯಕ್ತಿಯನ್ನು ದಸರಾ ಸಮಿತಿಗೆ ನಾಮಿನೇಟ್ ಮಾಡಿದ್ದಾರೆ.....

ಅಧ್ಯಕ್ಷರು.—ತಾವು ಈ ವಿಚಾರದಲ್ಲಿ ಚರ್ಚೆಗೆ ಅವಕಾಶ ಕೇಳುತಿರುವುದು ಯಾವ ಇಲ್ಲಿ ಈ ಗಾಗಲೆ ಇಷ್ಟಾವರ್ತಿ ಚರ್ಚೆ ಆಗಿದೆಯೋ ಅದನ್ನೆ ಮತ್ತೆ ಕೇಳುತ್ತಿದ್ದೀರಿ. ಅದು ಹೇಗೆ ಸಾಧ್ಯ? ತಾವು ಸಭೆಯಲ್ಲಿ ಮಾತನಾಡಿ ಉತ್ತರ ಕೊಡತಕ್ಕ ಸಂಳೆಯಲ್ಲಿ ಸಭೆಯಲ್ಲೇ ತಾವು ಇರುವುದಿಲ್ಲ. ಅಂದಾಗ ಇಲ್ಲಿ ಸರ್ಕಾರ ದವರು ಕೊಟ್ಟ ಉತ್ತರ ತಮ್ಮ ಗಮನಕ್ಕೆ ಬರಲು ಎಲ್ಲಿ ಸಾಧ್ಯವಿದ?.

ಶ್ರೀ ವಾಟಳ್ ನಾಗರಾಜ್.—ನಾನು ತಮ್ಮ ರೂಲಿಂಗಿಗೆ, ತಮ್ಮ ಪತ್ರಕ್ಕೆ ಬೆಲೆ ಕೊಡುತ್ತೇನೆ.

ಅಧ್ಯಕ್ಷರು.—ತಾವು ಇನ್ನೂ ಮುಂದುವರಿದರೆ ತಮ್ಮ ಭಾಷಣವನ್ನು ಬರೆದುಕೊಳ್ಳಬೇಡಿ ಎಂದು ನಾನು ಆಜ್ಞೆ ಮಾಡಬೇಕಾಗುವುದು. ದಯವಿಟ್ಟು ಅಷ್ಟಕ್ಕೆ ಅವಕಾಶ ಕೊಡಬೇಡಿ.....

ಶ್ರೀ ಎಚ್. ಡಿ ದೇವೇಗೌಡ.—ಮಾನ್ಯ ಅಧ್ಯಕ್ಷರೇ ಶ್ರೀ ಮಾನ್ ನಾಗರಾಜ್ ಅವರ ಮನಸ್ಸಿನಲ್ಲಿ ಏನೋಂದು ವೇದನೆ ಇದೆಯೇ ಅದೇ ವೇದನೆ ನಮಗೂ ಇದೆ.ಇವರ ವಿಚಾರದಲ್ಲಿ ಸರ್ಕಾರದವರ ಧೋರಣೇ ಏನೆಂಬುದೇ ಅರ್ಥವಾಗಂತ್ತಿಲ್ಲ.

ಅಧಕ್ಷರು.—ಅವರು ಅಡ್ಜೆರ್ನ್‌ಮೆಂಟ್ ಮೋಷನ್ ಕಳುಹಿಸಿದರೆ, ಅದನ್ನು ಇಲ್ಲಿ ಹೇಗೆ ಚರ್ಚೆಗೆ ಅವಕಾಶ ಮಾಡಿಕೊಡುವುದು? ಈ ವಿಚಾರ ತಮಗೇನು ಗೊತ್ತಿಲ್ಲದ್ದಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಅವರ ಮೇಲೆ ಇಷ್ಟು ಪ್ರಕಾರಂಗಳೂ ಮತ್ತು ಕೇಸುಗಳು ಇದ್ದಾಗ್ಯೂ ಮುಖ್ಯಮಂತ್ರಿಗಳು ಅದೇ ವ್ಯಕ್ತಿಯನ್ನು ಸಮಿತಿ ಮೇಲೆ ಸಮಿತಿಗಳಿಗೆ ಅವರನ್ನ ಹಾಕುತ್ತಿದ್ದಾರೆ. ಅಂಥ ಅಕ್ರಮ ವ್ಯವಹಾರಗಳಲ್ಲಿ ತೊಡಗಿರತಕ್ಕ ವ್ಯಕ್ತಿಗೆ ಸರ್ಕಾರದವರು ಇಷ್ಟೊಂದು ಪ್ರೋತ್ಸಾಹ ಕೊಡುವುದರ ಉದ್ದೇಶವಾದರೂ ಏನ್? ಈ ವಿಚಾರದಲ್ಲಿ ಸರ್ಕಾರದವರ ನಿಲುವೇನು ಎಂಬುದನ್ನು ಏಕೆ ಖಚಿತವಾಗಿ ತಿಳಿಸಬಾರದು ? ಮತ್ತೆ ಈ ವಿಷಯವನ್ನು ಬಿಜಿನೆಸ್ ಅಡ್ವೈಜರಿ ಕಮಿಟಿ ಯಲ್ಲಿ ಎತ್ತಬೇಕೆಂಬ ಉದ್ದೇಶ ಕೂಡ ನನಗಿದೆ.

ಅಧ್ಯಕ್ಷರು.—ಇದನು ಅಡ್ಜೆರ್ನಮೆಂಟ್ ನೋಷನ್ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಇದನ್ನು ಬೇರೆ ಇನ್ನಾವ ರೂಪದಲ್ಲಾದರೂ ಚರ್ಚೆ ಮಾಡುವುದಕ್ಕೆ ಪ್ರಯತ್ನಮಾಡಿ. ಒಂದು ನೋಟಿಸನ್ನು ಕೊಡಿ, ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ವಾಟಳ್ ನಾಗರಾಜ್.—ಸರ್ಕಾರದವರು ಈ ವಿಚಾರದಲ್ಲಿ ಬಹಳ ಪಾಪದ ಕೆಲಸ ಮಾಡಿದ್ದಾರೆ. ನಾನು ಇಲ್ಲಿ ಜನರಲ್ ಡಿಸ್ಕಷನ್ ಆನ್ ಬಜೆಟ್ ನಡೆದ ಕಾಲದಿಂದಲೂ ಒಂದಲ್ಲಾ ಒಂದು ವಿಧದಲ್ಲಿ ಕೆ. ಕೆ. ಮೂರ್ತಿ ಅವರ ಹೆಸರನ್ನು ಎತ್ತದೆ ಇದ್ದ ದಿನವಿಲ್ಲ. ಆಷ್ಟಾದರೂ ಸರ್ಕಾರ ಏಕೆ ಒಂದು ಖಚಿತವಾದ ಉತ್ತರವನ್ನು ಕೊಡಲಿಲ್ಲ?

ಅಧ್ಯಕ್ಷರು.—ನಾನು ಇನ್ನು ತಮಗೆ ಮಾ ನಾಡುವುದಕ್ಕೆ ಪರ್ಮಿಷನ್ ಕೊಟ್ಟಿಲ್ಲ ಎಂಬುದನ್ನು ತಿಳಿದು ತಿಳಿದೂ ತಾವು ಇಲ್ಲಯವರೆಗೂ ಮಾತನಾಡಿದ್ದೀರಿ.....

ಶ್ರೀ ವಾಟಾಳ್ ನಾಗರಾಜ್.—ತಾವು ನಾಳೆ ಪರ್ಮಿಷನ್ ಕೊಡುತ್ತೇನೆಂದು ಹೆಳಿದರೆ ಸಾಕು ನಾನು ಕಂಳಿತಂಬಿಡುತ್ತೇನೆ.

ಅಧ್ಯಕ್ಷರು.—ಅಷ್ಟು ಸುಲಭನಾಗಿ ಅದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಸ್. ಅಧ್ಯಕ್ಷರು ಇದನ್ನು ಬೇರೆ ರೂಪದಲ್ಲಿ ತಂದರೆ ನೋಡೋಣ ಎಂದು ಹೇಳುತ್ತಿದ್ದರೂ ತಮ್ಮಲ್ಲಿ ನನ್ನ ಒಂದು ಪ್ರಾರ್ಥನೆ, ಏನೆಂದರೆ ತಾವು ನಮ್ಮ ಹಕ್ಕು ಬಾಧ್ಯತೆಗಳನ್ನು ರಕ್ಷಣೆ ಮಾಡತಕ್ಕವರು ಕಾಪಾಡತಕ್ಕವರು ನಮ್ಮ ಮನಸ್ಸಿನಲ್ಲಿರತಕ್ಕ ವೇದನೆಯನ್ನು ನಾವು ತಮ್ಮ ಮುಂದೆ ತೋಡಿಕೊಳ್ಳದೆ, ಬೇರೆ ನಮಗೆಲ್ಲಿ ಮಾರ್ಗವಿದೆ? ಕೆ. ಕೆ. ಮೂರ್ತಿಯವರ ವಿಚಾರದಲ್ಲಿ ಸದಸ್ಯರು ಇಲ್ಲಿ ಕಟುವಾಗಿ ಹೇಳುತ್ತಿದ್ದರೂ ಸರ್ಕಾರದವರ ಕಡೆಯಿಂದ ಏಕೆ ಉತ್ತರ ಬರುತ್ತಿಲ್ಲ? ಇದನ್ನು ಮಾನ್ಯ ಅಧ್ಯಕ್ಷರು ಆಲೋಚನೆ ಮಾಡಬೇಕು.

ಶ್ರೀ ಪಾಟೀಲ್ ನಾಗರಾಜ್ — ಇಲ್ಲಿ ಕೈಗಾರಿಕಾ ಮಂತ್ರಿಗಳಿದ್ದಾರೆ ಫಿಲಂ ಇಂಡಸ್ಟ್ರಿಯಲ್ಲಿ ಕೆ.ಕೆ.ಮೂರ್ತಿಯವರನ್ನು ಅವಾರ್ಡ್ ಕೊಡತಕ್ಕ ಕಮಿಟಿಗೆ ಮೆಂಬರಾಗಿ ಹಾಕಿದ್ದಾರೆ ಈ ವ್ಯಕ್ತಿಗೆ ಏನು ಗೊತ್ತಿದೆ ಈ ಫಿಲಂ ಇಂಡಸ್ಟ್ರಿ ವಿಷಯ? ಬೇಕಾದರೆ ಕಿಂಪರಾಜ್ ಅವರನ್ನು ಹಾಕಲಿ ನಾನು ಬೇಡವೆನ್ನುವುದಿಲ್ಲ. ಸರ್ಕಾರಕ್ಕೆ ಮೋಸಮಾಡತಕ್ಕ ವ್ಯಕ್ತಿಗೆ, ಇವರಿಗೆ, ಮತ್ತೆ ೫ ಕೋಟಿ ರೂಪಾಯಿನ ಒಂದು ಪ್ರಾಜೆಕ್ಟಾನ್ನು ಕೊಡುವುದಕ್ಕೆ ಪ್ರಯತ್ನ ನಡೆಸುತ್ತಿದ್ದಾರೆ.....

ಶ್ರೀ ಎನ್. ಹುಚ್ಚಮಾಸ್ತಿಗೌಡ — ಅಧ್ಯಕ್ಷರೆ ಸಭೆಯಲ್ಲಿ ಮಾತನಾಡುವುದಕ್ಕೆ ಒಂದು ರೂಲ್ಸ್ ಅಥವಾ ರೆಗ್ಯುಲೇಷನ್ ಇವ್ಹಾರ್ಗೂ ಕೂಡ ಅವುಗಳನ್ನು ಮನ್ನಣೆ ಮಾಡದೆ ಹೀಗೆ ಮಾತನಾಡುವುದು ಅಂದರೆ ಎಲ್ಲಾ ಕ್ರಮಗಳನ್ನೂ ಮೀರಿ ಮಾತನಾಡುವುದು ಸಭೆಯ ಘನತೆ ಗೌರವಗಳಿಗೆ ಉಚಿತವಾದುದಲ್ಲ ಅನ್ನುವುದನ್ನು ನಾನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಎಮ್. ಎಸ್. ಕೃಷ್ಣನ್ — ಅವರು ಅಂಥ ಮೇಧಾವಿಗಳು, ಅವರಿಗೆ ಎಲ್ಲಾ ವಿಷಯಗಳಲ್ಲೂ ಅಪರಿಮಿತವಾದ ಜ್ಞಾನವಿದೆ ಎಂದು ಹೇಳಿ ಸರ್ಕಾರದವರು ತಮ್ಮನ್ನು ಡಿಫೆಂಡ್ ಮಾಡಿಕೊಳ್ಳಲಿ ಇಲ್ಲವೇ ಅವರನ್ನು ಅಫೆಂಡ್ ಮಾಡಿಕೊಳ್ಳಲಿ ಯಾವುದಕ್ಕೂ ಒಂದು ನಿರ್ದಿಷ್ಟವಾದ ಉತ್ತರ ಸರ್ಕಾರದವರಿಂದ ಬರಬೇಕು. ಈ ವಿಷಯಕ್ಕೆ ಒಂದು ಕೊಯಿಟಿಸ್ ಕೊಡೋ ರೀತಿಯಲ್ಲಿ ಒಂದು ಸರ್ಕಾರದ ಹೇಳಿಕೆ ಕೊಡುವುದಕ್ಕೆ ಅಧ್ಯಕ್ಷರು ಅವಕಾಶ ಮಾಡಿಕೊಟ್ಟರೆ ಆಷ್ಟು ಸಾಕು

ಶ್ರೀ ಕೆ. ಎಂ. ನಾಗಣ್ಣ : ಒಂದು ವಿನಂತಿಮಾಡಿಕೊಳ್ಳುತ್ತೇನೆ. ಶ್ರೀಮಾನ್ ಎಸ್. ಎಂ. ಕೃಷ್ಣರವರು ದಕ್ಷರು, ಪ್ರಾಮಾಣಿಕರು ಎಂದು ಹೆಸರು ಪಡೆದಿದ್ದಾರೆ. ಅವರ ವಿಚಾರ ಚೆನ್ನಾಗಿ ನನಗೆ ಗೊತ್ತಿದೆ. ಕೆ. ಕೆ. ಮೂರ್ತಿಯವರ ವಿಚಾರದಲ್ಲಿ ಅವರು ಹುಷಾರಾಗಿಲ್ಲದಿದ್ದರೆ ಅವರ ಬಳ್ಳಿಯ ಹಸರು ಮಣ್ಣು ಪಾಲಾಗುವುದು. ಇದರಲ್ಲಿ ಸಂದೇಹವಿಲ್ಲ. ಮಾನ್ಯ ಮಂತ್ರಿಗಳ ಹೆಸರಿಗೆ ಕಳಂಕ ಬರಬಾರದು, ಕಳಂಕ ಬರದಂತೆ ಅವರು ನೋಡಿಕೊಳ್ಳುವುದು ಅವಶ್ಯಕ.

ಶ್ರೀ ಸಿ ಬೈರೇಗೌಡ. ಕ್ಷಮಿಸಿ ಪರಿಸ್ಥಿತಿಯ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಸರಕಾರದವರು ಟೆಲಿಫೋನ್ ಮಾಡಿ ಹಣ ಖರ್ಚುಮಾಡಬಾರದೆಂದು ಎಲ್ಲಾ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೂ ತಿಳಿಸಿದ್ದಾರೆ. ಈಗ ಕುಡಿಯುವುದಕ್ಕೆ ನೀರಿಲ್ಲ, ದನಗಳಿಗೆ ಮೇವಿಲ್ಲ. ಹಾಗಿರುವಾಗ ಏಕೆ ಹೀಗೆ ಮಾಡಿರುವುದು? ದಯವಿಟ್ಟು ಮಂತ್ರಿಗಳು ಈ ವಿಚಾರದಲ್ಲೇನು ಮಾಡಿದ್ದಾರೆಂಬುದನ್ನು ತಿಳಿಸಬೇಕು. ಸರಕಾರ ಆ ರೀತಿ ಆರ್ಡರು ಮಾಡಿದೆಯೇ ಇಲ್ಲವೇ ಎಂಬುದನ್ನು ತಿಳಿಸಬೇಕು.

ಅಧ್ಯಕ್ಷರು : ನಿಮಗೆ ಏನು ಸುದ್ದಿ ಬಂದಿದೆ ಅದನ್ನು ಈಗ ಹೇಳಿದ್ದೀರಿ ಅವರು ವಿಚಾರಿಸಿ ತಿಳಿಸಬೇಕು.

MYSORE LAND REFORCES (Amendment) BILL 1972
MOTIO TO CONSIDER *Debate Continued*]

† ಶ್ರೀ ಎಚ್. ಡಿ. ದೇವೇಗೌಡ : ಮಾನ್ಯ ಸಭಾಧ್ಯಕ್ಷಣೀಯರೇ, ನಿನ್ನೆ ದಿವಸ ೧೯೭೨ನೇ ಇಸವಿಯ ಭೂ ಸುಧಾರಣೆ ಕಾಯಿದೆ ಬಗ್ಗೆ ಮಾತನಾಡುವಾಗ ೧೬ ಕಿಲೋಮೀಟರ್ ನಿಬಂಧನೆ ಬಗ್ಗೆ ಪ್ರಸ್ತಾಪಮಾಡುತ್ತಿದೆ. ನಾನಾಗಲೇ ಹೇಳಿದಹಾಗೆ ಒಬ್ಬ ರೈತ ಈ ಸಿಲಿಂಗ್ ಲಿಮಿಟ್ಟಿನೊಳಗೆ ೧೬ ಕಿಲೋ ಮೀಟರಿನೊಳಗೆ ಮಾತ್ರ ಜಮೀನಿಟ್ಟುಕೊಳ್ಳಲು ಸಾಧ್ಯವಾಗುತ್ತದೆ. ಸಿಲಿಂಗಿನೊಳಗೆ ಜಮೀನಿದ್ದರೂ ಎರಡು ತಾಲ್ಲೂಕಿನೊಳಗೆ ಜಮೀನಿದ್ದರೆ ಅದನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಇಂಥ ಒಂದು ಆಡ್ಡಿ ಬರುವುದಂ. ಇದರ ಜೊತೆಗೆ ಇಂದು ನಮ್ಮ ಮಂತ್ರಿಗಳಿಗೆ ಗೊತ್ತಿರುವಹಾಗೆ ನೆಲಮಂಗಲದ ಬಹು ಜನರು ಸಕ್ರೆಟೇರಿಯಟ್ಟಿನಲ್ಲಿ ಜವಾನರಾಗಿದ್ದಾರೆ. ಫ್ಯಾಮಿಲಿ ಎಂಬುದಕ್ಕೆ ಈಗ ಹೊಸ ಡೆಫಿನಿಷನ್ ಇದೆ. ಗಂಡ-ಹೆಂಡತಿ ಮತ್ತು ೩ ಮೈನರ್ ಮಕ್ಕಳು ಇರುವುದಕ್ಕೆ ಒಂದು ಫ್ಯಾಮಿಲಿ ಎಂದು ಪರಿಗಣಿಸುವರು. ೧೬